# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಬುಧವಾರ, ಮೇ 22, 2024

ಸಂಪುಟ : 51 ಸಂಚಿಕೆ : 08 ☎ 08192-254736 91642 99999 RNI No: 27369/75 ಪುಟ : 6 ರೂ : 5.00 www.janathavani.com janathavani@mac.com









**ತುಂಗಭದ್ರೆ**

ಕಳೆದ ಕೆಲ ದಿನಗಳಿಂದ ಉತ್ತಮ ಮಳೆಯಾಗುತ್ತಿರುವುದರಿಂದ ಹರಿಹರ ಬಳಿಯ ತುಂಗಭದ್ರಾ ನದಿಗೆ ನೀರು ಹರಿದು ಬರಲಾರಂಭಿಸಿದೆ. ಬರದ ಹಿನ್ನೆಲೆಯಲ್ಲಿ ನದಿ ಬಹುತೇಕ ಬತ್ತಿ ಹೋಗಿತ್ತು.

# ಉತ್ತಮ ಮಳೆ, ಬಿತ್ತನೆಯತ್ತ ರೈತನ ಚಿತ್ತ

## ಅನ್ನದಾತನಲ್ಲಿ ಆಶಾಕಿರಣ ಮೂಡಿಸಿದ ಮುಂಗಾರು ಪೂರ್ವ, 2.45 ಲಕ್ಷ ಹೆ. ಬಿತ್ತನೆ ಗುರಿ

ದಾವಣಗೆರೆ: ಕಳೆದ ಕೆಲ ದಿನಗಳಿಂದ ಜಿಲ್ಲೆಯಲ್ಲಿ ಸುರಿಯುತ್ತಿರುವ ಮುಂಗಾರು ಪೂರ್ವ ಮಳೆ ಅನ್ನದಾತನಲ್ಲಿ ಹರ್ಷ ಮೂಡಿಸಿದೆ.

ಹಿಂದಿನ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ ನಿಗದಿತ ಬಿತ್ತನೆ ಗುರಿ ಪೂರ್ಣಗೊಂಡಿದ್ದರೂ, ವಾಡಿಕೆಯಷ್ಟು ಮಳೆ ಸುರಿಯದೆ ಬರ ಆವರಿಸಿಕೊಂಡಿತ್ತು. ಈ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆ 'ಬರಪೀಡಿತ'ವಾಗಿತ್ತು.

ಬಿತ್ತಿ ಬೆಳೆದಿದ್ದ ಫಸಲು ಕಣ್ಣೆದುರಿಗೇ ಒಣಗಿ ತೀವ್ರ ಸಂಕಷ್ಟದಲ್ಲಿದ್ದ ರೈತರಿಗೆ ಮುಂಗಾರು ಆಶಾಕಿರಣ ಮೂಡಿಸಿದೆ. ಈ ವರ್ಷದ ಮುಂಗಾರು ಉತ್ತಮವಾಗಲಿದೆ ಎಂಬ ಆಶಾಭಾವನೆಯಿಂದಲೇ ಕೃಷಿ ಕಾರ್ಯಗಳ ತಯಾರಿಯಲ್ಲಿದ್ದಾರೆ. ಬಿತ್ತನೆಗೆ ಭೂಮಿ ಹದಗೊಳಿಸುವ ಕಾರ್ಯ ಅಲ್ಲಲ್ಲಿ ನಡೆಯುತ್ತಿದೆ. ಬೀಜ, ಗೊಬ್ಬರದ ಲೆಕ್ಕಾಚಾರಗಳೂ ನಡೆಯುತ್ತಿವೆ.

**2.45 ಲಕ್ಷ ಹೆಕ್ಟೇರ್ ಗುರಿ:** ಕೃಷಿ ಇಲಾಖೆ ರೈತನ ನೆರವಿಗೆ ಸನ್ನದ್ಧವಾಗಿದೆ. ಬಿತ್ತನೆ ಬೀಜ-ಗೊಬ್ಬರದ ಅಭಾವ ಬಾರದಂತೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಈ ಬಾರಿ ಜಿಲ್ಲೆಯಲ್ಲಿ 2,45,303 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ.

ಮೆಕ್ಕೆಜೋಳದಲ್ಲಿ ಅಕ್ಕಡಿ ಬೆಳೆಯಾಗಿ ತೊಗರಿ ಹಾಗೂ ಅವರೆ ಬೆಳೆಯುವಂತೆ ಪ್ರೋತ್ಸಾಹಿಸಿ ಯಶಸ್ಸನ್ನೂ ಕಂಡಿದ್ದ ಕೃಷಿ ಇಲಾಖೆ ಈ ವರ್ಷವೂ ಅಕ್ಕಡಿ ಬೆಳೆ ಪ್ರೋತ್ಸಾಹಿಸುವ (4ನೇ ಪುಟಕ್ಕೆ)

**ಜಿಲ್ಲೆಯಲ್ಲಿ ಉತ್ತಮ ಮಳೆ ನಿರೀಕ್ಷೆ ಇದೆ. ಬಿತ್ತನೆ ಬೀಜ, ಗೊಬ್ಬರಕ್ಕೆ ಕೊರತೆ ಇಲ್ಲ. ಆದರೆ ರೈತರು ಲೂಸ್ ಬಿತ್ತನೆ ಬೀಜ ಖರೀದಿಸದೇ, ರೈತ ಸಂಪರ್ಕ ಕೇಂದ್ರ ಅಥವಾ ಅಧಿಕೃತ ಕೃಷಿ ಪರಿಕರ ಮಾರಾಟಗಾರರಿಂದ ಖರೀದಿಸಿ ಬಿತ್ತನೆ ಮಾಡಬೇಕು.**

**- ಶ್ರೀನಿವಾಸ್ ಚಿಂತಾಲ್, ಜಂಟಿ ಕೃಷಿ ನಿರ್ದೇಶಕ.**



ದಾವಣಗೆರೆ ಸಮೀಪ ಜಮೀನೊಂದರಲ್ಲಿ ಟ್ರ್ಯಾಕ್ಟರ್‌ನಿಂದ ಉಳುಮೆ ಮಾಡುತ್ತಿರುವ ರೈತ

### 24 ತಾಸಲ್ಲಿ 23.6 ಮಿ.ಮೀ. ಮಳೆ

ಜಿಲ್ಲೆಯಲ್ಲಿ ಕಳೆದ 24 ಗಂಟೆಯಲ್ಲಿ (ಮೇ 20ರ ಬೆಳಿಗ್ಗೆ 8.30 ರಿಂದ 21ರ ಬೆಳಿಗ್ಗೆ 8.30ರವರೆಗೆ) 23.6 ಮಿ.ಮೀ. ಮಳೆಯಾಗಿದೆ. ಚನ್ನಗಿರಿ ತಾಲ್ಲೂಕಿನಲ್ಲಿ 26 ಮಿ.ಮೀ., ದಾವಣಗೆರೆ 22.8, ಹರಿಹರ 22.36, ಹೊನ್ನಾಳಿ 16.5, ಜಗಳೂರಲ್ಲಿ ಅತಿ ಹೆಚ್ಚು 26.8 ಹಾಗೂ ನ್ಯಾಮತಿಯಲ್ಲಿ 20.2 ಮಿ.ಮೀ. ಮಳೆಯಾಗಿದೆ.

ಕಳೆದ ಏಳು ದಿನಗಳಲ್ಲಿ 77 ಮಿ.ಮೀ. ಮಳೆಯಾಗಿದ್ದು, ಚನ್ನಗಿರಿ ತಾಲ್ಲೂಕಿನಲ್ಲಿ ಅತಿ ಹೆಚ್ಚು ಅಂದರೆ 104.5 ಮಿ.ಮೀ. ಮಳೆಯಾಗಿದೆ. ಒಟ್ಟಾರೆ ಮೇ 1 ರಿಂದ 21ರವರೆಗೆ ಜಿಲ್ಲೆಯಲ್ಲಿ 91.ಮಿ.ಮೀ. ಮಳೆಯಾಗಿದೆ. ಚನ್ನಗಿರಿ ಹಾಗೂ ನ್ಯಾಮತಿಯಲ್ಲಿ ಉತ್ತಮ ಮಳೆಯಾಗಿದೆ.

ಜಿಲ್ಲೆಯಲ್ಲಿ ಪ್ರಸಕ್ತ ವರ್ಷದ ಜನವರಿಯಿಂದ ಮೇ 14ರವರೆಗೆ ಶೇ.42ರಷ್ಟು ಮಳೆ ಕೊರತೆಯಾಗಿತ್ತು. ಏಪ್ರಿಲ್ ತಿಂಗಳಲ್ಲಿ ಶೇ 33ರಷ್ಟು ಮಳೆ ಕೊರತೆಯಾಗಿತ್ತು. ಆದರೆ ಮೇ ಮಾಹೆ ಮಳೆ ಕೊರತೆ ನೀಗಿಸಿದೆ.

### ನಿಟ್ಟುಸಿರು ಬಿಟ್ಟ ತೋಟದ ಮಾಲೀಕರು

ಮಳೆ ಬಾರದೆ ಹಾಗೂ ಅಂತರ್ಜಲ ಕುಸಿತ ಕಂಡ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಅಡಿಕೆ ಹಾಗೂ ತೆಂಗಿನ ತೋಟದ ಮಾಲೀಕರು ಫಸಲಿಗೆ ಬಂದಿದ್ದ ಮರಗಳನ್ನು ಉಳಿಸಿಕೊಳ್ಳಲು ಹರಸಾಹಸ ಪಡುತ್ತಿದ್ದರು. ಹಲವೆಡೆ ಟ್ಯಾಂಕರ್ ಮೂಲಕ ನೀರುಣಿಸಿ ತೋಟ ಉಳಿಸಿಕೊಳ್ಳಲಾಗಿತ್ತು. ಆದರೆ ಕಳೆದೊಂದು ವಾರದಿಂದ ಬೀಳುತ್ತಿರುವ ಮಳೆ ತೋಟಗಳಿಗೆ ಕಳೆ ತಂದಿದೆ. ತೋಟಗಳ ಮಾಲೀಕರು ನಿಟ್ಟುಸಿರು ಬಿಟ್ಟಿದ್ದಾರೆ. ಅಡಿಕೆ ತೋಟಗಳು ಹೆಚ್ಚಾಗಿರುವ ಚನ್ನಗಿರಿಯಲ್ಲಿಯೇ ಉತ್ತಮ ಮಳೆಯಾಗಿದೆ.

# ವಿದ್ಯುತ್ ಅಭಾವ ನೀಗಿಸಿದ ಮಳೆ

ಬೆಂಗಳೂರು, ಮೇ 21 - ಕಳೆದ ಕೆಲವು ದಿನಗಳಿಂದ ರಾಜ್ಯದಲ್ಲಿ ಸುರಿಯುತ್ತಿರುವ ಮಳೆಯಿಂದ ವಿದ್ಯುತ್ ಅಭಾವ ನೀಗಿದೆ.

ಮುಂಗಾರು ಮತ್ತು ಹಿಂಗಾರು ಮಳೆ ಕೈಕೊಟ್ಟಿದ್ದರಿಂದ ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಅಗಾಧವಾಗಿ ಹೆಚ್ಚಿತ್ತು.

ಗೃಹಜ್ಯೋತಿ ಯೋಜನೆ ಅನುಷ್ಠಾನ ಹಾಗೂ ಮಳೆ ಅಭಾವದಿಂದ ರಾಜ್ಯದಲ್ಲಿ 17 ಸಾವಿರ ಮೆಗಾವ್ಯಾಟ್‌ವರೆಗೂ ಬೇಡಿಕೆ ಹೆಚ್ಚಿ ದಾಖಲೆ ಸ್ಥಾಪಿಸಿತ್ತು. ಲೋಕಸಭಾ ಚುನಾವಣಾ ಸಂದರ್ಭದಲ್ಲಿ ಅಗಾಧ ವಿದ್ಯುತ್ ಬೇಡಿಕೆ ರಾಜ್ಯ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿತ್ತು.

ಈ ಸಂದರ್ಭಲ್ಲಿ ಬೇಡಿಕೆ ಈಡೇರಿಸದಿದ್ದರೆ, ಆಡಳಿತಾರೂಢ ಕಾಂಗ್ರೆಸ್‌ಗೆ ಹಿನ್ನಡೆ ಉಂಟಾಗುತ್ತಿತ್ತು, ಇದನ್ನು ತಪ್ಪಿಸಲು ಮತ್ತು ಬೇಡಿಕೆ ಸರಿದೂಗಿಸಲು ವಿದ್ಯುತ್ ಹೆಚ್ಚು ಉತ್ಪಾದಿಸುವ ರಾಜ್ಯಗಳಿಂದ ಖರೀದಿಗೆ ಮುಂದಾಯಿತು.

ಛತ್ತೀಸ್‌ಘಡ, ತಮಿಳುನಾಡು, ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಿಂದ ಗಣನೀಯ ಪ್ರಮಾಣದಲ್ಲಿ ರಾಜ್ಯ ಸರ್ಕಾರ ವಿದ್ಯುತ್ ಖರೀದಿ ಮಾಡಿತು. ಇಷ್ಟಾದರೂ ಮೇ, ಜೂನ್ ಪರಿಸ್ಥಿತಿ ನಿಭಾಯಿಸಲಾಗದ ಕಷ್ಟಕ್ಕೆ ಸಿಲುಕಿತ್ತು.



**ಕಳೆದ ಎರಡು ತಿಂಗಳು ಬೇಡಿಕೆ ಪ್ರಮಾಣ ಪೂರೈಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿತ್ತು. ಆದರೆ ಈ ತಿಂಗಳು ಕೃಷಿ ಪಂಪ್‌ಸೆಟ್ ಮತ್ತು ಗೃಹ ಬಳಕೆ ವಿದ್ಯುತ್ ಬೇಡಿಕೆ ಪ್ರಮಾಣದಲ್ಲಿ ಸುಮಾರು 3,000 ಮೆಗಾವ್ಯಾಟ್‌ಗಳಷ್ಟು ಕುಸಿತ ಕಂಡಿದೆ.**

ಗೃಹ ಬಳಕೆ, ರೈತರ ಪಂಪ್‌ಸೆಟ್, ಕೈಗಾರಿಕಾ ವಲಯಗಳ ಬೇಡಿಕೆ ಪ್ರಮಾಣ ಪೂರೈಸಲು ಸಾಧ್ಯವಾಗದ ಸ್ಥಿತಿಗೆ ಸರ್ಕಾರ ತಲುಪಿತ್ತು.

ಮುಂಗಾರು ಕೈಕೊಟ್ಟಿದ್ದರಿಂದ ಲಿಂಗನಮಕ್ಕಿ ಸೇರಿದಂತೆ ಪ್ರಮುಖ ಜಲವಿದ್ಯುತ್ ಜಲಾಶಯಗಳಲ್ಲಿನ ನೀರಿನ ಸಂಗ್ರಹ ಪ್ರಮಾಣ ತೀರಾ ಕುಸಿದಿತ್ತು. ಶಾಖೋತ್ಪನ್ನ ಸ್ಥಾವರಗಳಿಂದ ಹೆಚ್ಚಿನ ವಿದ್ಯುತ್ ಉತ್ಪಾದನೆಗೆ ಆದ್ಯತೆ ನೀಡಿದ ಸರ್ಕಾರ, ಮೇ ಮತ್ತು ಜೂನ್ ತಿಂಗಳಲ್ಲಿ ವಿದ್ಯುತ್ ಬೇಡಿಕೆ ತೀವ್ರವಾಗಿ ಹೆಚ್ಚಾಗುವ ನಿರೀಕ್ಷೆ ಹಿನ್ನೆಲೆಯಲ್ಲಿ ಈ ತಿಂಗಳುಗಳಲ್ಲಿ ಜಲವಿದ್ಯುತ್ ಘಟಕಗಳಿಂದ ಹೆಚ್ಚು ಉತ್ಪಾದನೆ ನಿರೀಕ್ಷಿಸಲಾಗಿತ್ತು.

ಹೊರ ರಾಜ್ಯಗಳಿಂದ ಖರೀದಿಸುವ ವಿದ್ಯುತ್ ಪ್ರಮಾಣವನ್ನೂ ಹೆಚ್ಚಿಸಲು ಕೆಲವು ರಾಜ್ಯಗಳೊಂದಿಗೆ ಮಾತುಕತೆ ನಡೆಸಲು ಇಂಧನ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ಸಹಾ ರವಾನೆಯಾಗಿತ್ತು.

ಕಳೆದ ಕೆಲವು ದಿನಗಳಿಂದ ರಾಜ್ಯದ ಬಹುತೇಕ ಭಾಗಗಳಲ್ಲಿ ಮಳೆಯಾಗುತ್ತಿದ್ದು, ಕೃಷಿ ಪಂಪ್‌ಸೆಟ್ ಮತ್ತು ಗೃಹ ಬಳಕೆ ವಿದ್ಯುತ್ ಬೇಡಿಕೆ ಪ್ರಮಾಣದಲ್ಲಿ ಸುಮಾರು 3,000 ಮೆಗಾವ್ಯಾಟ್‌ಗಳಷ್ಟು ಕುಸಿತವಾಗಿದೆ.

ಜೂನ್‌ನಲ್ಲಿ ಆರಂಭವಾಗಲಿರುವ ಮುಂಗಾರು ವಾಡಿಕೆಯಂತೆ ಇರಲಿದೆ, ಜೂನ್ ಮೊದಲ ವಾರ ಕೇರಳಕ್ಕೆ ಮುಂಗಾರು ಪ್ರವೇಶ ನಿರೀಕ್ಷಿಸಲಾಗಿದೆ. ಕಳೆದ ವರ್ಷದಂತೆ ಈ ವರ್ಷ ಮಳೆ ಕೊರತೆ ಇರುವುದಿಲ್ಲ ಎಂದು ಹವಾಮಾನ ಇಲಾಖೆ ತಿಳಿಸಿದೆ.

# ಶೀಘ್ರ ಸ್ಥಳೀಯ ಸಂಸ್ಥೆಗಳ ಚುನಾವಣೆ : ಡಿಕೆಶಿ

ಬೆಂಗಳೂರು, ಮೇ 21 - ಜಿಲ್ಲಾ, ತಾಲ್ಲೂಕು ಪಂಚಾಯ್ತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಶೀಘ್ರದಲ್ಲೇ ಚುನಾವಣೆ ನಡೆಸಿ ಜನರಿಗೆ ಅಧಿಕಾರ ಕೊಡುವುದಾಗಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಘೋಷಣೆ ಮಾಡಿದ್ದಾರೆ.

ಪ್ರದೇಶ ಕಾಂಗ್ರೆಸ್ ಕಚೇರಿಯಲ್ಲಿ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಪುಣ್ಯಸ್ಮರಣೆ (4ನೇ ಪುಟಕ್ಕೆ)

**ಖಾದಿ ಬಟ್ಟೆ ಹಾಕಿಕೊಂಡು, ಕಾರು ಇಟ್ಟುಕೊಂಡು ಎಂಎಲ್‌ಸಿ ಮಾಡಿ, ಅಧ್ಯಕ್ಷನನ್ನಾಗಿ ಮಾಡಿ ಎಂದರೆ ಅದು ಇಲ್ಲಿ ನಡೆಯುವುದಿಲ್ಲ. ಕೆಲಸ ಮಾಡುವವರಿಗೆ ಆದ್ಯತೆ.**



## ಕೆಫೆ ಸ್ಫೋಟ : 15 ಕಡೆ ದಾಳಿ, ದಾಖಲೆಗಳ ವಶ

ಬೆಂಗಳೂರು, ಮೇ 21 - ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂದು ನಗರದ ಕುಮಾರಸ್ವಾಮಿ ಲೇಔಟ್, ಬನಶಂಕರಿ ಸೇರಿದಂತೆ ದೇಶಾದ್ಯಂತ 15 ಕಡೆ ಏಕಕಾಲಕ್ಕೆ ದಾಳಿ ನಡೆಸಿರುವ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಮಹತ್ವದ ದಾಖಲೆಗಳನ್ನು ವಶ ಪಡಿಸಿಕೊಂಡಿದೆ.

ಉಗ್ರರ ಜೊತೆ ಸಂಪರ್ಕ ಹೊಂದಿದ್ದವರ ಬೆಂಗಳೂರಿನಲ್ಲಿನ ನಾಲ್ಕು ಸ್ಥಳಗಳ ಮೇಲೆ ಎನ್‌ಐಎ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಪ್ರಕರಣ ಸಂಬಂಧ ಬೆಂಗಳೂರು ಮಾತ್ರವಲ್ಲದೆ, ಕೊಯಮತ್ತೂರಿನ ವೈದ್ಯ ಜಾಫರ್ ಇಕ್ಬಾಲ್ ಮತ್ತು ನಯನ್ ಸಾದಿಕ್ (2ನೇ ಪುಟಕ್ಕೆ)

# ನರ್ಸಿಂಗ್ ಕಾಲೇಜು : ಸಿಬಿಐ ಅಧಿಕಾರಿಗಳಿಗೆ ಲಂಚ

ನವದೆಹಲಿ, ಮೇ 21 – ಮಧ್ಯ ಪ್ರದೇಶದ ನರ್ಸಿಂಗ್ ಕಾಲೇಜುಗಳ ಹಗರಣದಲ್ಲಿ ಸಿ.ಬಿ.ಐ. ಅಧಿಕಾರಿಗಳು ಪ್ರತಿ ಸಂಸ್ಥೆಯಿಂದ 2 ರಿಂದ 10 ಲಕ್ಷ ರೂ.ಗಳವರೆಗೆ ಲಂಚ ಪಡೆದಿದ್ದರು.

ಕೇಂದ್ರೀಯ ತನಿಖಾ ಸಂಸ್ಥೆಯ ಡಿ.ಎಸ್.ಪಿ. ಆಶಿಶ್ ಪ್ರಸಾದ್, ಇನ್ಸ್‌ಪೆಕ್ಟರ್‌ಗಳಾದ ರಾಹುಲ್ ರಾಜ್ ಹಾಗೂ ಸುಶೀಲ್ ಕುಮಾರ್ ಮಜೊಕ ಸೇರಿದಂತೆ 22 ಜನರು ಲಂಚ ಪಡೆದಿದ್ದಾರೆ ಎಂದು ಸಿ.ಬಿ.ಐ. ಪ್ರಕರಣ ದಾಖಲಿಸಿದೆ. ಭಾನುವಾರ ರಾಜ್ ಬಂಧಿಸಲಾಗಿತ್ತು.

ನರ್ಸಿಂಗ್ ಕಾಲೇಜುಗಳಿಗೆ ಅನುಕೂಲವಾಗುವಂತೆ ವರದಿ ನೀಡಲು ಲಂಚ ಪಡೆಯಲಾಗಿತ್ತು. ಈ ಬಗ್ಗೆ ಎಂಟು ನರ್ಸಿಂಗ್ ಕಾಲೇಜುಗಳ ನಿರ್ದೇಶಕರು ಹಾಗೂ ಅಧ್ಯಕ್ಷರ ವಿರುದ್ಧವೂ ಎಫ್.ಐ.ಆರ್. ದಾಖಲಿಸಲಾಗಿದೆ.

ಭ್ರಷ್ಟಾಚಾರವನ್ನು ಸಿ.ಬಿ.ಐ. ಎಳ್ಳಷ್ಟೂ ಸಹಿಸುವುದಿಲ್ಲ. ಭ್ರಷ್ಟಾಚಾರದಲ್ಲಿ ತೊಡಗಿದ ತನ್ನ ಅಧಿಕಾರಿಗಳನ್ನೂ ಸಿ.ಬಿ.ಐ. ಬಿಡುವುದಿಲ್ಲ ಎಂದು ತನಿಖಾ ಸಂಸ್ಥೆಯ ವಕ್ತಾರರು ತಿಳಿಸಿದ್ದಾರೆ.

ರಾಜ್ಯದ ನರ್ಸಿಂಗ್ ಕಾಲೇಜುಗಳ ಪರಿಶೀಲನೆಗಾಗಿ ಮಧ್ಯ ಪ್ರದೇಶ ಹೈಕೋರ್ಟ್ ಆದೇಶಿಸಿದ ನಂತರ, ಇದಕ್ಕಾಗಿ ಸಿ.ಬಿ.ಐ.ನ ತಂಡವೊಂದನ್ನು ರಚಿಸಲಾಗಿತ್ತು. ಇದರಲ್ಲಿ ಇಂಡಿಯನ್ ನರ್ಸಿಂಗ್ ಕೌನ್ಸಿಲ್‌ನಿಂದ ನೇಮಕಗೊಂಡ ಅಧಿಕಾರಿಗಳೂ ಇದ್ದರು.

ಆದರೆ, ಈ ತಂಡ (2ನೇ ಪುಟಕ್ಕೆ)

# ಶ್ರೀಶೈಲ ಕ್ರೆಡಿಟ್ ಸೊಸೈಟಿಯ ನೂತನ ಸ್ವಂತ ಕಟ್ಟಡದ ಉದ್ಘಾಟನೆ

ದಾವಣಗೆರೆ, ಮೇ 21 - ಜಿಲ್ಲೆಯ ಪ್ರತಿಷ್ಠಿತ ಕ್ರೆಡಿಟ್ ಕೋ - ಆಪರೇಟಿವ್ ಸೊಸೈಟಿಗಳಲ್ಲೊಂದಾದ ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯು ಇದೀಗ ಸ್ವಂತ ಕಟ್ಟಡ ಹೊಂದಿದೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ನಗರದ ಹದಡಿ ರಸ್ತೆಯ ವಿದ್ಯಾರ್ಥಿ ಭವನದ ಕೂಗಳತೆಯಲ್ಲಿದ್ದ ಶ್ರೀ ಶ್ರೀಶೈಲ ಸೊಸೈಟಿಯ ಪ್ರಧಾನ ಕಛೇರಿಯನ್ನು, ಕಛೇರಿ ಸಮೀಪದಲ್ಲಿರುವ ಕೆಟಿಜೆ ನಗರ 3ನೇ ಮುಖ್ಯ ರಸ್ತೆ, 16ನೇ ತಿರುವಿನಲ್ಲಿ ನೂತನವಾಗಿ ನಿರ್ಮಿಸಿರುವ ಸಂಘದ ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

ಗ್ರಾಹಕರ ಮೂಲಭೂತ ಸೌಲಭ್ಯಗಳೊಂದಿಗೆ ಅತ್ಯಾಧುನಿಕವಾಗಿ ಶ್ರೀಶೈಲ ಕ್ರೆಡಿಟ್ ಸೊಸೈಟಿ ಪ್ರಧಾನ ಕಛೇರಿಯ ಕಟ್ಟಡವನ್ನು ನಿರ್ಮಿಸಲಾಗಿದ್ದು, ಕಳೆದ ವಾರ ನಡೆದ ಸರಳ ಸಮಾರಂಭದಲ್ಲಿ ನೂತನ ಕಟ್ಟಡವನ್ನು ಸಾರ್ವಜನಿಕರ ಸೇವೆಗೆ ಸಮರ್ಪಿಸಲಾಯಿತು.

ಸುಮಾರು ಎರಡು ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಈ ಕಟ್ಟಡದಲ್ಲಿ ಗ್ರಾಹಕರು, ಸದಸ್ಯರು ಕುಳಿತುಕೊಳ್ಳಲು ವಿಶಾಲ ಆಸನಗಳು, ಹವಾನಿಯಂತ್ರಿತ ಕೊಠಡಿ-ಕೌಂಟರ್‌ಗಳು, ಆಡಳಿತ ಮಂಡಳಿ ಸಭೆಗಾಗಿ ವಿಶಾಲವಾದ ಹಾಲ್, ವಿಶಾಲವಾದ ವಿವಿಧ ಅಳತೆಗಳ ಲಾಕರ್‌ಗಳನ್ನು ಅಳವಡಿಸಲಾಗಿದೆ.

**ಉದ್ಘಾಟನೆ :** ಪ್ರಥಮ ದರ್ಜೆ ಗುತ್ತಿಗೆದಾರರೂ ಆಗಿರುವ ಶ್ರೀ ಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷ ಆರ್. ವೆಂಕಟರೆಡ್ಡಿ ಅವರು, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸಂಘದ ಸದಸ್ಯರು, ಗ್ರಾಹಕರು, ಹಿತೈಷಿಗಳು, ಗಣ್ಯರು ಮತ್ತು ಸಿಬ್ಬಂದಿ ವರ್ಗದವರ ಚಪ್ಪಾಳೆಗಳ ಮಧ್ಯೆ ಟೇಪು ಕತ್ತರಿಸಿರುವುದರ ಮೂಲಕ ನೂತನ ಕಟ್ಟಡವನ್ನು ಉದ್ಘಾಟಿಸಿದರು.



ಆಡಳಿತ ಮಂಡಳಿ ಸಭೆಯ ಹಾಲ್ ಅನ್ನು ವರ್ತಕರೂ ಆಗಿರುವ ಸಂಘದ ಉಪಾಧ್ಯಕ್ಷ ವಿ. ಪ್ರಕಾಶ್ ಮತ್ತು ಇತರೆ ವಿವಿಧ ವಿಭಾಗಗಳನ್ನು ಆಡಳಿತ ಮಂಡಳಿಯ ಹಿರಿಯ ಸದಸ್ಯರುಗಳು ಉದ್ಘಾಟಿಸುವುದರೊಂದಿಗೆ ನಾಗರಿಕರ ಸೇವೆಗೆ ಸಮರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಔಪಚಾರಿಕವಾಗಿ ಮಾತನಾಡಿದ ಸಂಘದ ಅಧ್ಯಕ್ಷ ವೆಂಕಟರೆಡ್ಡಿ, ಸಂಘದ ಸದಸ್ಯರು ಮತ್ತು ಗ್ರಾಹಕರು ಹಾಗೂ ಹಿತೈಷಿಗಳು ನೀಡುತ್ತಿರುವ ನಿರಂತರ ಪ್ರೋತ್ಸಾಹ ದಿಂದಾಗಿ ಶ್ರೀಶೈಲ ಸೊಸೈಟಿಯು ಇಂದು ಸ್ವಂತ ಕಟ್ಟಡ ಹೊಂದಲು ಸಾಧ್ಯವಾಯಿತು ಎಂದು ಹರ್ಷ ವ್ಯಕ್ತಪಡಿಸಿದರು.

ಸಂಘದ ಉಪಾಧ್ಯಕ್ಷ ಪ್ರಕಾಶ್ ಮಾತನಾಡಿ, ಸಂಘದ ಸದಸ್ಯರು - ಗ್ರಾಹಕರ ಸಹಕಾರ, ಹಿತೈಷಿಗಳು- ಗಣ್ಯರು ಕೊಡುತ್ತಿರುವ ಪ್ರೋತ್ಸಾಹ, ಆಡಳಿತ ಮಂಡಳಿ ಸದಸ್ಯರ ಶ್ರಮ, ಸಿಬ್ಬಂದಿ ವರ್ಗದವರ ಕ್ರಿಯಾಶೀಲತೆ ಮತ್ತು ದಕ್ಷತೆಯಿಂದಾಗಿ ಈ ಸಂಘ ಲಾಭ ದಾಯಕದಲ್ಲಿ ಮುನ್ನಡೆದು ಸ್ವಂತ ಕಟ್ಟಡ ಹೊಂದಿದೆ ಎಂದು ಎಲ್ಲರನ್ನೂ ಸ್ಮರಿಸಿ ಕೃತಜ್ಞತೆ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಸಂಘದ ನಿರ್ದೇಶಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಹಿರಿಯರು, ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗದವರನ್ನು ಸನ್ಮಾನಿಸಿ, ಗೌರವಿಸುವುದರೊಂದಿಗೆ ಪ್ರತಿಯೊಬ್ಬರ ಸೇವೆ ಮತ್ತು ಕಾರ್ಯ ನಿರ್ವಹಣೆಯನ್ನು ಮುಕ್ತಕಂಠದಿಂದ ಪ್ರಶಂಸಿಸಲಾಯಿತು.

ಸಂಘದ ನಿರ್ದೇಶಕರುಗಳಾದ ಟಿ.ಹೆಚ್. ರಾಜಶೇಖರ್, ಮೇಕಾ ಮುರುಳಿಕೃಷ್ಣ, ಕೆ.ಬಿ. ನಾಗರಾಜ್, ನಾಗೇಂದ್ರ ಎನ್. ಲದ್ವಾ, ಶ್ರೀಮತಿ ಎ. ಶ್ರೀದೇವಿ ತಿಮ್ಮಾರೆಡ್ಡಿ, ಕೆ. ನಾರಾಯಣ, ಬಿಜ್ಜಂ ವೆಂಕಟೇಶ್ವರ ರೆಡ್ಡಿ, ಬಿ. ಯೋಗಿ ರೆಡ್ಡಿ, ಬಿ. ವೆಂಕಟೇ ಶ್ವರ ರೆಡ್ಡಿ, ಜಿ.ಆರ್. ರಾಜಾನಾಯ್ಕ, ಶ್ರೀಮತಿ ವೈ. ಸರೋಜ ವೆಂಕಟೇಶ್ವರ ರೆಡ್ಡಿ ಉಪಸ್ಥಿತರಿದ್ದರು. ಸಂಘದ ಮುಖ್ಯ ಕಾರ್ಯನಿರ್ವಾಹಕ ರಾಮ ನಾರಾಯಣ ರೆಡ್ಡಿ ಅವರಿಂದ ಸ್ವಾಗತ, ವ್ಯವಸ್ಥಾಪಕ ಕೆ. ರಾಘವೇಂದ್ರ ರಾವ್ ಅವರಿಂದ ವಂದನಾರ್ಪಣೆ, ಹಿರಿಯ ನಿರ್ದೇಶಕ ಕೆ.ಬಿ. ನಾಗರಾಜ್ ಅವರಿಂದ ಕಾರ್ಯಕ್ರಮ ನಿರೂಪಣೆ ನಡೆಯಿತು.

## ಮೊಳಕಾಲ್ಮೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಮೊಬೈಲ್ ಬೆಳಕೇ ಗತಿ

ಮೊಳಕಾಲ್ಮೂರು, ಮೇ 21 – ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ವಿದ್ಯುತ್ ಸಮಸ್ಯೆಯಾಗಿ ವೈದ್ಯರು ಮೊಬೈಲ್ ಬೆಳಕಿನಲ್ಲೇ ಚಿಕಿತ್ಸೆ ನೀಡಿದ ಘಟನೆ ನಡೆದಿದೆ. (2ನೇ ಪುಟಕ್ಕೆ)


**ನಾಳೆ ಕಲ್ಲಳ್ಳಿ ನಾಗರಾಜ್ ಅವರ ಕೈಲಾಸ ಸಮಾರಾಧನೆ**



43ನೇ ವಾರ್ಡಿನ ನಗರ ಪಾಲಿಕೆ ಸದಸ್ಯರೂ ಆದ ನಮ್ಮ ಸಹೋದರ

**ಶ್ರೀ ಕಲ್ಲಳ್ಳಿ ನಾಗರಾಜ್**

ಅವರ ಕೈಲಾಸ ಸಮಾರಾಧನೆ ಶಾಮನೂರಿನ ಶ್ರೀ ಆಂಜನೇಯ ಸ್ವಾಮಿ ಸಮುದಾಯ ಭವನದಲ್ಲಿ ದಿನಾಂಕ 23.05.2024ರ ಗುರುವಾರ ಬೆಳಿಗ್ಗೆ 10.30ಕ್ಕೆ ನೆರವೇರಲಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

**ಕಲ್ಲಳ್ಳಿ ರಾಮಚಂದ್ರಪ್ಪ ಮತ್ತು ಸಹೋದರರು, ಶಾಮನೂರು**

**ಮೊಬೈಲ್ : 78927-99625**

# ಕೆಲಸದ ನೆಪದಲ್ಲಿ ಮಹಾರಾಷ್ಟ್ರದ ವ್ಯಕ್ತಿಗೆ ಮಹಿಳೆ ಮಾರಾಟ

## ಭದ್ರಾವತಿ ಮೂಲದ ಮೂವರನ್ನು ಬಂಧಿಸಿದ ಹೊನ್ನಾಳಿ ಪೊಲೀಸರು



ಹೊನ್ನಾಳಿ, ಮೇ 21 - ಕೆಲಸ ಕೊಡಿಸುವ ನೆಪದಲ್ಲಿ ಮಹಿಳೆಯನ್ನು ಅಪಹರಿಸಿ ಮಹಾರಾಷ್ಟ್ರದ ಸೊಲ್ಲಾಪುರದ ವ್ಯಕ್ತಿಗೆ ಮಾರಾಟ ಮಾಡಿದ್ದ ಪ್ರಕರಣವನ್ನು ಹೊನ್ನಾಳಿ ಪೊಲೀಸರು ದೂರು ದಾಖಲಾಗಿ 24 ಗಂಟೆಯೊಳಗೆ ಬೇಧಿಸಿ ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

**ಘಟನೆಯ ವಿವರ;** ತಾಲ್ಲೂಕಿನ ಕ್ಯಾಸಿನಕೆರೆ ಗ್ರಾಮದ ಗಂಗಮ್ಮ ತನ್ನ ಗಂಡನ ಮರಣಾನಂತರ 6 ವರ್ಷದ ಮಗುವಿನೊಂದಿಗೆ ತನ್ನ ತವರು ಮನೆಯಲ್ಲೇ ಆಶ್ರಯ ಪಡೆದಿರುತ್ತಾರೆ. ಜೀವನಕ್ಕೆ ಕೂಲಿ ಕೆಲಸ ಮಾಡುತ್ತಿದ್ದು ಆಕಸ್ಮಿಕವಾಗಿ ಪರಿಚಯವಾದ ಭದ್ರಾವತಿಯ ತಂಡವೊಂದು ಇದೇ ದಿನಾಂಕ 12ರಂದು ಭದ್ರಾವತಿಯ ಕಲ್ಯಾಣ ಮಂಟಪದ ಕೆಲಸಕ್ಕೆಂದು ಕರೆದುಕೊಂಡು ಹೋಗಿದ್ದರು.

ಆ ದಿನ ರಾತ್ರಿ ಗಂಗಮ್ಮ ಕೆಲಸ ಮುಗಿಸಿಕೊಂಡು ಮನೆಗೆ ಬಂದಿದ್ದರು. ಮತ್ತೇ 13ರ ಬೆಳಿಗ್ಗೆ ಕೆಲಸಕ್ಕೆಂದು ಕರೆದುಕೊಂಡು ಹೋಗಿದ್ದು ನಂತರ ಮರಳಿ ಬರಲೇ ಇಲ್ಲ. ಕೆಲಸಕ್ಕೆಂದು ಹೋಗಿರಬಹುದು ಮರಳಿ ಬರಬಹುದು ಎಂಬ ನಿರೀಕ್ಷೆಯಲ್ಲಿದ್ದ ಕುಟುಂಬಸ್ಥರಿಗೆ 2-3 ದಿನಗಳ ನಂತರ ರೂಪಾ ಎಂಬುವವರ ಮೊಬೈಲ್ ನಂಬರ್‌ನಿಂದ ಗಂಗಮ್ಮ ಕರೆ ಮಾಡಿ ರೋಜಿಲೀನಾ, ಮಲ್ಲಿಕಾರ್ಜುನ ಮತ್ತು ಲೋಕೇಶ್ ಅವರುಗಳು ನನ್ನನ್ನು ಅಪಹರಿಸಿ ಮಹಾರಾಷ್ಟ್ರದ ಸೊಲ್ಲಾಪುರದ ವ್ಯಕ್ತಿಗೆ 1 ಲಕ್ಷ ರೂ.ಗೆ ಮಾರಾಟ ಮಾಡಿದ್ದಾರೆ.

ಹಣ ಕೊಟ್ಟ ವ್ಯಕ್ತಿ ನನ್ನನ್ನು ಮದುವೆ ಮಾಡಿಕೊಂಡು ಮನೆ ಕೆಲಸಕ್ಕೆ ಇರಿಸಿಕೊಳ್ಳುತ್ತೇನೆ ಎಂದು ಹೇಳುತ್ತಿದ್ದಾರೆ, ನನಗೆ ಇಷ್ಟವಿಲ್ಲ. ನನ್ನನ್ನು ನನ್ನ ಊರಿಗೆ ಕಳುಹಿಸಿಕೊಡಿ ಎಂದು ಬೇಡಿಕೊಂಡಿದ್ದಕ್ಕೆ, ನಾನು ಕೊಟ್ಟ 1 ಲಕ್ಷ ಹಣ ಕೊಟ್ಟರೆ ಮಾತ್ರವೇ ಊರಿಗೆ ಕಳುಹಿಸುವುದಾಗಿ ಹೇಳುತ್ತಿದ್ದಾರೆ ಎಂದು ತಮ್ಮ ಅಳಲನ್ನು ತೋಡಿಕೊಂಡಿದ್ದು, ನಂತರ ಅಪಹೃತಳ ಸಹೋದರ ದುರ್ಗಪ್ಪ ಈ ಬಗ್ಗೆ ಮೇ 19 ರಂದು ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುತ್ತಾರೆ.

ಪ್ರಕರಣವನ್ನು ಗ್ರಾಮಾಂತರ ಡಿವೈಎಸ್ಪಿ ಪ್ರಶಾಂತ್ ಮನ್ನೋಳಿ ಮಾರ್ಗದರ್ಶನದಲ್ಲಿ ಪಿಎಸ್‌ಐ ಶಾಂತಲಾ ಅವರು ದೂರು ದಾಖಲಿಸಿಕೊಂಡು ಪ್ರತ್ಯೇಕ ತಂಡಗಳನ್ನು ರಚಿಸಿ ಭದ್ರಾವತಿ ಮೂಲದ 3 ಜನ ಆರೋಪಿಗಳನ್ನು ಪತ್ತೆ ಹಚ್ಚಿ ಗಂಗಮ್ಮನವರನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಆರೋಪಿಗಳ ವಿರುದ್ಧ ಮಾನವ ಕಳ್ಳ ಸಾಗಾಣಿಕೆ ಪ್ರಕರಣದ ಐಪಿಸಿ ಸೆಕ್ಷನ್ 366, 370 ಮತ್ತು 34ರಡಿಯಲ್ಲಿ ದೂರು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಹಾಜರು ಪಡಿಸಿ ವಿಚಾರಣೆ ನಡೆಸುತ್ತಿರುವುದಾಗಿ ಗ್ರಾಮಾಂತರ ಡಿವೈಎಸ್ಪಿ ಪ್ರಶಾಂತ್ ಮನ್ನೋಳಿ ಪತ್ರಿಕೆಗೆ ಮಾಹಿತಿ ನೀಡಿದ್ದಾರೆ.

# ಕ್ಯಾನ್ಸರ್ ಪೀಡಿತ ರೈತ, ಜೀವ ಬಿಡುವ ಮುನ್ನವೂ ಸಾಲ ತೀರಿಸಿ, ಋಣಮುಕ್ತನಾಗಿ ಸಾಯುವ ಆಸೆ



### ಆಸ್ಪತ್ರೆಯಿಂದ ನೇರವಾಗಿ ಮಾಕನೂರಿನ ಯೂನಿಯನ್ ಬ್ಯಾಂಕ್ ಬಾಗಿಲಲ್ಲಿ ಮಲಗಿ ಪ್ರತಿಭಟಿಸಿದ ರೈತ

ರಾಣೇಬೆನ್ನೂರು, ಮೇ 21 - ತಾನು ಸುಮಾರು 15 ವರ್ಷಗಳ ಹಿಂದೆ ಮಾಡಿದ್ದ ಸಣ್ಣ ಪ್ರಮಾಣದ ಸಾಲವೀಗ, ಬ್ಯಾಂಕಿನವರು ಅದರ ಅವಶ್ಯಕತೆಗೆ ರೈತನ ಗಮನಕ್ಕೆ ತಾರದೇ ಮಾಡಿದ ರಿಸ್ಟ್ರಕ್ಚರ್‌ನಂಥ ತಪ್ಪಿನಿಂದಾಗಿ ದೊಡ್ಡ ಸಾಲವಾಗಿದೆ. ಬ್ಯಾಂಕಿನವರ ಈ ತೀರ್ಮಾನದಿಂದ ಆ ರೈತನಿಗೆ ಓಟಿಎಸ್ ಯೋಜನೆಯೂ ಸಿಗದೇ ಸಾಲ ಮನ್ನಾ ಯೋಜನೆಯ 2 ಲಕ್ಷ ರೂ. ಲಾಭವೂ ದೊರಕಿಲ್ಲ. ಆ ಸಾಲವನ್ನು ಓಟಿಎಸ್ ಯೋಜನೆಗೆ ಒಳಪಡಿಸಿದರೆ ನಾನು ಮರುಪಾವತಿ ಮಾಡಿ ಋಣಮುಕ್ತನಾಗಿ ಪ್ರಾಣ ಬಿಡುತ್ತೇನೆಂದು ಕ್ಯಾನ್ಸರ್ ಪೀಡಿತ, ಇಂದೋ - ನಾಳೆ ಪ್ರಾಣ ಬಿಡುವ ಸ್ಥಿತಿಯಲ್ಲಿರುವ ರೈತ ಆಸ್ಪತ್ರೆಯಿಂದ ನೇರವಾಗಿ ಬಂದು ಮಾಕನೂರಿನ ಯೂನಿಯನ್ ಬ್ಯಾಂಕ್ ಬಾಗಿಲಲ್ಲಿ ಮಲಗಿರುವುದನ್ನು ನೋಡಿದರೆ ರೈತನ ಗುಣಧರ್ಮವೇ ಅಂಥದ್ದು ಎಂದು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ಹೇಳಿದರು.

ಇಂದು ಈ ಘಟನೆ ನಡೆದ ಸ್ಥಳಕ್ಕೆ ದಿಢೀರ್ ಭೇಟಿ ನೀಡಿ ರೈತನ ಕುಟುಂಬಸ್ಥರು ಮತ್ತು ರೈತರು ಹಾಗೂ ಬ್ಯಾಂಕ್ ಸಿಬ್ಬಂದಿ, ಮಾಧ್ಯಮ ಮಿತ್ರರು, ಪೊಲೀಸ್ ಅಧಿಕಾರಿಗಳೊಂದಿಗೆ ಮಾತನಾಡಿದ ಅವರು, ರೈತಾಪಿ ವರ್ಗ ಅತಿವೃಷ್ಟಿ, ಅನಾವೃಷ್ಟಿ, ಕೊರೊನಾ, ಲಾಕ್‌ಡೌನ್, ಅಗತ್ಯ ವಸ್ತುಗಳ ಬೆಲೆ ಏರಿಕೆ, ತಾನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಇರುವುದರಿಂದ ಆರ್ಥಿಕವಾಗಿ ಜರ್ಝರಿತನಾಗಿದ್ದಾನೆ.

ಕೆಲವರು ಮಾನ ಮರ್ಯಾದೆಗೆ ಅಂಜಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇನ್ನು ಕೆಲವವರು ಇದೇ ರೀತಿ ಏನೇ ಕಷ್ಟ ಕಾರ್ಪಣ್ಯಗಳು ಬಂದರೂ ತೆಗೆದುಕೊಂಡ ಸಾಲವನ್ನು ಮರುಪಾವತಿ ಮಾಡಿ ಋಣಮುಕ್ತನಾಗಬೇಕೆಂದು ಹೆಣಗಾಡಿ ಹೆಣಗಾಡಿ ಸಾಲ ಮರುಪಾವತಿಸುತ್ತಾರೆ.

ಕೋಟಿ ಕೋಟಿ ಸಾಲ ಮಾಡಿ ಬ್ಯಾಂಕಿಗೆ ಮತ್ತು ಸರ್ಕಾರಕ್ಕೆ ವಂಚಿಸಿ ವಿದೇಶಕ್ಕೆ ಪಾರಾಗುವ ವಿಜಯ್ ಮಲ್ಯ, ನೀರವ್ ಮೋದಿಯಂಥ ದೊಡ್ಡ ದೊಡ್ಡ ಉದ್ಯಮಿಗಳಿಗೂ, ಜೀವ ಬಿಡುವ ಮುನ್ನವೂ ಸಾಲ ಮರುಪಾವತಿಸಿ ಋಣಮುಕ್ತನನ್ನಾಗಿ ಜೀವ ಬಿಡಬೇಕೆನ್ನುವ ಸ್ವಾಭಿಮಾನಿ ಇಂಥ ರೈತನಿಗೂ ಇರುವ ವ್ಯತ್ಯಾಸ ಎಂದ ಪಾಟೀಲರು, ಇಂಥ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕರು ಮಧ್ಯೆ ಪ್ರವೇಶಿಸಬೇಕೆಂದರು.

ಜಿಲ್ಲಾಧ್ಯಕ್ಷ ಈರಣ್ಣ ಹಲಗೇರಿ ಮಾತನಾಡಿ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಎ.ಜಿ.ಎಂ. ಕೆ. ಭೈರೇಗೌಡ, ಚೀಪ್ ಮ್ಯಾನೇಜರ್ ಮೋಹನ್‌ಕುಮಾರ್, ಈ ಘಟನೆಯಲ್ಲಿ ಏನಾದರೂ ಅವಘಡವಾದರೆ ಅದರ ಹೊಣೆ ಅವರದ್ದೇ ಎಂದರು.

ಈ ಸಂದರ್ಭದಲ್ಲಿ ಚಂದ್ರಣ್ಣ ಬೇಡರ, ರೇವಣ್ಣ ಬಾರ್ಕಿ, ಭೀಮಶಿ ಕೂಲಿ, ನಿಗರೆಡ್ಡಿ ಅಂತ್ರವಳ್ಳಿ, ಸುರೇಶ ಮಲ್ಲಾಪುರ, ಹರಿಹರಗೌಡ ಪಾಟೀಲ, ನಾಗನಗೌಡ ಮುದಿಗೌಡ್ರ, ಚನ್ನಪ್ಪ ದೊಡ್ಡಮನಿ, ಬಸವರಾಜ ಯಲ್ಲಕ್ಕನವರ, ವಿರುಪಾಕ್ಷಗೌಡ ಪಾಟೀಲ, ಕೆಂಚಪ್ಪ ಮುಷ್ಟೂರುನಾಯ್ಕ, ಯಲ್ಲಪ್ಪ ಓಲೇಕಾರ, ಮಾದೇವಪ್ಪ ಕುಸಗೂರು, ಶ್ರೀಕಾಂತ ಪಾಟೀಲ, ಹಾಲೇಶ ಕೆಂಚಣ್ಣನವರ ಮುಂತಾದ ಮುಖಂಡರು ಭಾಗವಹಿಸಿದ್ದರು.

ಬ್ಯಾಂಕ್ ವ್ಯವಸ್ಥಾಪಕ ಆತುಲ್‌ಸಿಂಗ್ ಮಾತನಾಡಿ, 3 ದಿನಗಳೊಳಗಾಗಿ ರೀಜಿನಲ್ ಕಛೇರಿಗೆ ಮಾತನಾಡಿ ಸಮಸ್ಯೆ ಬಗೆಹರಿಸುತ್ತೇನೆಂದು ಭರವಸೆ ಕೊಟ್ಟ ಮೇಲೆ ಪ್ರತಿಭಟನೆ ಹಿಂದಕ್ಕೆ ಪಡೆಯಲಾಯಿತು.


## ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್ ಹೆಚ್. ಆರ್. ಪುಟ್ಟಪ್ಪ ನಿಧನ



ದಾವಣಗೆರೆ ಸಿಟಿ ವಿನೋಬ ನಗರ ವಾಸಿ,
ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್

**ಹೆಚ್.ಆರ್. ಪುಟ್ಟಪ್ಪ**

ಇವರು ದಿನಾಂಕ 21.5.2024ರ ಮಂಗಳವಾರ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 71 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.5.2024ರ ಬುಧವಾರ ಸಂಜೆ 4 ಕ್ಕೆ ದಾವಣಗೆರೆ ತಾಲ್ಲೂಕು ಆರನೇ ಮೈಲಿಕಲ್ಲು ಬಳಿ ನೆರವೇರಲಿದೆ.

**ದುಃಖತಪ್ತರು : • ಡಾ. ಹೇಮಂತ್ ಹೆಚ್.ಪಿ., • ಶರತ್ ಹೆಚ್.ಪಿ.**

**ಮೊ : 99865 90559, 97422 13975**



## ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ

**ಚಿತ್ರದುರ್ಗದ ಹೆಸರಾಂತ ಲಕ್ಷ್ಮೀ ಬಜಾರ್ (ಮಾರವಾಡಿ ಗಲ್ಲಿ) ನಲ್ಲಿ 15x45 ಅಳತೆಯ ಒಟ್ಟು 3 ಅಂತಸ್ತಿನ ಕಟ್ಟಡ ಬಾಡಿಗೆಗೆ ದೊರೆಯುತ್ತದೆ. (ಕಮರ್ಷಿಯಲ್ ಮಳಿಗೆ) ಬೆಳ್ಳಿ ಬಂಗಾರದ ಅಂಗಡಿಗೆ ಹಾಗೂ ಬಟ್ಟೆ ಅಂಗಡಿ ಮಳಿಗೆಗೆ ಉತ್ತಮವಾದ ಸ್ಥಳವಾಗಿದೆ. (ಶೌಚಾಲಯದ ವ್ಯವಸ್ಥೆ ಇದೆ)**

**ಮೊ : 97414 23656, 99806 60306**




### ಹನುಮನಹಳ್ಳಿ ಗೌಡ್ರು ನಾಗರಾಜಪ್ಪ ನಿಧನ



ದಾವಣಗೆರೆ ತಾಲ್ಲೂಕು ಹನುಮನಹಳ್ಳಿ ಗ್ರಾಮದ ಗೌಡ್ರು ನಾಗರಾಜಪ್ಪ (78) ಅವರು ದಿನಾಂಕ 21.05.2024ರ ಮಂಗಳವಾರ ರಾತ್ರಿ 10 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 22.05.2024ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಹನುಮನಹಳ್ಳಿಯ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.



### ಅಸ್ಗರ್ ಅಹ್ಮದ್ ನಿಧನ



ದಾವಣಗೆರೆ ಶಂಕರ್ ಲೇಔಟ್, ಬಿಎಸ್‌ಎನ್‌ಎಲ್ ಆಫೀಸ್ ಹತ್ತಿರದ ವಾಸಿ ಪ್ರೆಸ್ ರಿಪೋರ್ಟರ್, ಸಮಾಜ ಸೇವಕರಾಗಿದ್ದ ಅಸ್ಗರ್ ಅಹ್ಮದ್ (58) ಇವರು ದಿನಾಂಕ 21.5.2024ರ ಮಂಗಳವಾರ ಬೆಳಿಗ್ಗೆ 6.30ಕ್ಕೆ ನಿಧನರಾದರು. ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 22.5.2024ರ ಬುಧವಾರ ಸಂಜೆ 5 ಗಂಟೆಗೆ ನಗರದ ಪಿ.ಬಿ. ರಸ್ತೆಯಲ್ಲಿರುವ ಖಬರಸ್ತಾನದಲ್ಲಿ ನೆರವೇರಿಸಲಾಗುವುದು.


## 15 ಕಡೆ ದಾಳಿ, ದಾಖಲೆಗಳ ವಶ

**(1ನೇ ಪುಟದಿಂದ)** ಮನೆಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ವರದಿಯಾಗಿದೆ.

ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದ ಆರೋಪಿಗಳಾದ ಅಬ್ದುಲ್ ಮತೀನ್ ತಾಹ ಮತ್ತು ಮುಸಾವಿರ್ ಹುಸೇನ್ ಶಾಜಿಬ್‌ಗೆ ಸಹಾಯ ಮಾಡಿದ ಹಿನ್ನೆಲೆಯಲ್ಲಿ ಬೆಂಗಳೂರಿನ ಕುಮಾರಸ್ವಾಮಿ ಲೇಔಟ್ ಹಾಗೂ ಬನಶಂಕರಿಯ ಒಟ್ಟು ನಾಲ್ಕು ಸ್ಥಳಗಳ ಮೇಲೆ ಎನ್‌ಐಎ ದಾಳಿ ಮಾಡಿ ದಾಖಲೆಗಳನ್ನು ಪಡೆದುಕೊಂಡಿದೆ. ಉಗ್ರ ಮತೀನ್ ಬೆಂಗಳೂರಿಗೆ ಬಂದಾಗ ಸಹಾಯ ಮಾಡಿದ ಆರೋಪದ ಹಿನ್ನೆಲೆಯಲ್ಲಿ ಆತನೊಂದಿಗೆ ಸಂಪರ್ಕಕ್ಕೆ ಬಂದಿದ್ದವರ ಮನೆ ಹಾಗೂ ವಾಸ ಸ್ಥಳದ ಮೇಲೆ ದಾಳಿ ಮಾಡಲಾಗಿದೆ.

ಬೆಂಗಳೂರಿನ ರಾಮೇಶ್ವರಂ ಕೆಫೆ ಸ್ಫೋಟ ನಂತರ ಕೋಲ್ಕತಾದಲ್ಲಿ ತಲೆಮರೆಸಿಕೊಂಡಿದ್ದ ಉಗ್ರರಾದ ಪ್ರಕರಣದ ಮಾಸ್ಟರ್ ಮೈಂಡ್ ಮತೀನ್ ತಾಹ ಹಾಗೂ ಬಾಂಬ್ ಇರಿಸಿದ್ದ ಮುಸಾವಿರ್ ಶಾಜಿಬ್‌ನನ್ನು ಎನ್‌ಐಎ ಬಂಧಿಸಿತ್ತು.

## ಚಿಕಿತ್ಸೆಗೆ ಮೊಬೈಲ್ ಬೆಳಕೇ ಗತಿ

**(1ನೇ ಪುಟದಿಂದ)** ಮಳೆ ಕಾರಣದಿಂದ ತಾಲ್ಲೂಕಿನಲ್ಲಿ ವಿದ್ಯುತ್ ಸಮಸ್ಯೆಯಾಗಿದೆ. ಸಾರ್ವಜನಿಕ ಆಸ್ಪತ್ರೆಯಲ್ಲಿ ವಿದ್ಯುತ್ ವ್ಯತ್ಯಯವಾಗುವ ಜೊತೆಗೆ, ಜನರೇಟರ್ ಸಹ ಕೆಟ್ಟಿತ್ತು. ಹೀಗಾಗಿ ವೈದ್ಯರು ಚಿಕಿತ್ಸೆಗಾಗಿ ಮೇಣದ ಬತ್ತಿ ಹಾಗೂ ಮೊಬೈಲ್ ಬೆಳಕಿನ ಮೊರೆ ಹೋಗಿದ್ದಾರೆ. ಜನರೇಟರ್ ಕೆಟ್ಟು ವಾರವಾದರೂ ರಿಪೇರಿಯಾಗಿಲ್ಲ ಎಂದು ದೂರಲಾಗಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಬಿಜೆಪಿ, ಇದು ಕಾಂಗ್ರೆಸ್ ಸರ್ಕಾರದ ವರ್ಷದ ಸಂಭ್ರಮಾಚರಣೆಯ ಗ್ಯಾರಂಟಿ ಕತ್ತಲು ಭಾಗ್ಯ ಎಂದು ಲೇವಡಿ ಮಾಡಿದೆ.

## ಸಿಬಿಐ ಅಧಿಕಾರಿಗಳಿಗೆ ಲಂಚ

**(1ನೇ ಪುಟದಿಂದ)** ಅನರ್ಹ ಸಂಸ್ಥೆಗಳಿಂದ ಲಂಚ ಪಡೆದು ಅವುಗಳಿಗೆ ಅನುಕೂಲವಾಗುವ ರೀತಿಯಲ್ಲಿ ವರದಿ ನೀಡುತ್ತಿವೆ ಎಂದು ಸಿ.ಬಿ.ಐ.ಗೆ ಮಾಹಿತಿ ದೊರೆತಿತ್ತು. ಈ ಬಗ್ಗೆ ಪರಿಶೀಲಿಸಿದ ನಂತರ ಎಫ್.ಐ.ಆರ್. ದಾಖಲಿಸಲಾಗಿದೆ.

ನರ್ಸಿಂಗ್ ಕಾಲೇಜುಗಳ ಕೂಟದಿಂದ 2ರಿಂದ 10 ಲಕ್ಷ ರೂ.ಗಳವರೆಗೆ ಲಂಚ ಪಡೆಯಾಗಿತ್ತು. ಇದನ್ನು ಸಿ.ಬಿ.ಐ. ಅಧಿಕಾರಿಗಳು ಹಾಗೂ ಮಧ್ಯವರ್ತಿಗಳಿಗೆ ಹಂಚಲಾಗಿತ್ತು ಎಂದು ಎಫ್.ಐ.ಆರ್.ನಲ್ಲಿ ಹೇಳಲಾಗಿದೆ.

## ನಗರದ ಜೈನ್ ಕಾಲೇಜಿನಲ್ಲಿ ಇಂದು ಎತ್ನಿಕ್ ಡೇ

ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಆವರಣದಲ್ಲಿ ಇಂದು ಎತ್ನಿಕ್ ಡೇ ನಡೆಯಲಿದೆ. ಮುಖ್ಯ ಅಥಿತಿಯಾಗಿ ಹಿರಿಯ ದೃಶ್ಯ ಕಲಾವಿದ ಎ. ಮಹಾಲಿಂಗಪ್ಪ, ಇಂಡಿಯಾ ಕಂಜೆನ್ಸಿಯಲ್ಲಿ 2024-25 ವಿಜೇತರಾದ ಡಾ. ಶೃತಿ ರಾಜ್ ಎಂ.ಆರ್ ಎಸ್. ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಉತ್ಸವವನ್ನು ಆಯೋಜಿಸಲಾಗಿದೆ ಎಂದು ಪ್ರಾಂಶುಪಾಲ ಡಾ. ಗಣೇಶ್ ಡಿ.ಬಿ., ಸಲಹೆಗಾರರಾದ ಮಂಜಪ್ಪ ಸಾರಥಿ, ಸಂಚಾಲಕ ಮೌನೇಶಚಾರಿ ಎಸ್.ತಿಳಿಸಿದರು.


## ಅಣ್ಣಾಪುರದ ಶ್ರೀ ಟಿ. ಶಿವರುದ್ರಪ್ಪ ನಿಧನ



ದಾವಣಗೆರೆ ತಾಲ್ಲೂಕು, ಜಿಲ್ಲೆಯ ಅಣ್ಣಾಪುರ ಗ್ರಾಮದ ವಾಸಿ

**ಶ್ರೀಮತಿ ಹೆಚ್. ಸರೋಜಮ್ಮನವರ**

ಪೂಜ್ಯ ಪತಿಯವರಾದ

**ರಂಗಾಪುರದ ಶ್ರೀ ಟಿ. ಶಿವರುದ್ರಪ್ಪನವರು**

ದಿನಾಂಕ : 20.05.2024ರ ಸೋಮವಾರ ರಾತ್ರಿ 8.10ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 83 ವರ್ಷ ವಯಸ್ಸಾಗಿತ್ತು. ಪತ್ನಿ, ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ, ಮೃತರ ಪಾರ್ಥಿವ ಶರೀರವನ್ನು ದಿನಾಂಕ : 22.05.2024ರ ಬುಧವಾರ ಮಧ್ಯಾಹ್ನ 2.00 ಗಂಟೆಗೆ ಅಣ್ಣಾಪುರದ ಸ್ವಗ್ರಾಮದಲ್ಲಿ ಮೃತರ ಅಂತ್ಯಕ್ರಿಯೆಯನ್ನು ಅವರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗದವರು**

**ಫೋ. : 8762285716, 9844291214**



॥ ಶ್ರೀಉಜ್ಜಿನಿ ಮರುಳಸಿದ್ದೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ನಗರದ ಎಂ.ಸಿ.ಸಿ. 'ಬಿ' ಬ್ಲಾಕ್ ವಾಸಿ

**ಶ್ರೀಮತಿ ಶ್ರೀ ಕೆ.ಎಸ್. ಸುರೇಶ್ ಮತ್ತು ಸಹೋದರರು ಹಾಗೂ ಕೂಲಂಬಿ ವಂಶಸ್ಥರು ಮತ್ತು ಮಳಲ್ಕೆರೆ ಗ್ರಾಮಸ್ಥರು ಇವರು ಮಾಡುವ ವಿಜ್ಞಾಪನೆಗಳು.**

ದಿನಾಂಕ : 14.05.2024ನೇ ಮಂಗಳವಾರ ಬೆಳಿಗ್ಗೆ 8.35 ಗಂಟೆಗೆ ನನ್ನ ಪೂಜ್ಯ ತಂದೆಯವರಾದ

**ಶರಣ ಡಾ॥ ಕೆ.ಆರ್. ಸೋಮಶೇಖರಪ್ಪನವರು**

( ನಿವೃತ್ತ ಜಿಲ್ಲಾ ಸಹಾಯಕ ವೈದ್ಯಾಧಿಕಾರಿಗಳು)

ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 22.05.2024ರ ಬುಧವಾರ ಬೆಳಿಗ್ಗೆ 11.30 ಗಂಟೆಗೆ ಡಾ. ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳ ಹಿರೇಮಠ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ, ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ರೇಖಾ ಶ್ರೀ ಕೆ.ಎಸ್. ಸುರೇಶ್, ಇಂಜಿನಿಯರ್
ಶ್ರೀಮತಿ ಸವಿತ ಡಾ॥ ವಿಜಯಕುಮಾರ್ ಎಸ್. ಕೂಲಂಬಿ
ಪ್ರೊಫೆಸರ್, ಕೀಲು ಮೂಳೆ ವಿಭಾಗ, ಜೆಜೆಎಂ ಮೆಡಿಕಲ್ ಕಾಲೇಜ್, ದಾವಣಗೆರೆ.
ಶ್ರೀಮತಿ ಗಂಗಮ್ಮ ಶ್ರೀ ಕೆ.ಎಸ್. ಸತೀಶ್
ಮೊಮ್ಮಗ : ಡಾ॥ ಸಿದ್ದಾರ್ಥ್ ಕೆ.ಎಸ್., ಮೊಮ್ಮಗಳು : ರಿಷಿಕಾ ಕೂಲಂಬಿ
ಕೂಲಂಬಿ ವಂಶಸ್ಥರು, ಮಳಲೆಕೆರೆ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


## ಮಲೇಬೆನ್ನೂರಿನಲ್ಲಿ ಇಂದು ನುಡಿ ನಮನ ಕಾರ್ಯಕ್ರಮ



ಮಲೇಬೆನ್ನೂರು, ಮೇ 21- ಇಲ್ಲಿನ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾಗಿದ್ದ ರಾಜಯೋಗಿನಿ ಬ್ರಹ್ಮಾಕುಮಾರಿ ಮಂಜುಳಾಜೀ ಕಳೆದ ವಾರ ನಿಧನರಾಗಿದ್ದು, ಅವರಿಗೆ ನಾಳೆ ದಿನಾಂಕ 22ರ ಬುಧವಾರ ಬೆಳಿಗ್ಗೆ 10.30ಕ್ಕೆ ಬ್ರಹ್ಮಾಕುಮಾರೀಸ್ ಆಶ್ರಮದಲ್ಲಿ ನುಡಿ ನಮನ ಕಾರ್ಯಕ್ರಮ ವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೊಳೆಸಿರಿಗೆರೆ ಕೇಂದ್ರದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಶಾಂತಾಜೀ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಶ್ವರೀಯ ವಿಶ್ವವಿದ್ಯಾಲಯದ ಹುಬ್ಬಳ್ಳಿ ವಲಯದ ನಿರ್ದೇಶಕರಾದ ರಾಜಯೋಗಿ ಬ್ರಹ್ಮಾ ಕುಮಾರ ಡಾ. ಬಸವರಾಜ ರಾಜಋಷಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದು, ದಾವಣಗೆರೆಯ ಜಡೇ ಸಿದ್ಧ ಶಿವಯೋಗೀಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿ ಆಶೀರ್ವಚನ ನೀಡುವರು ಎಂದರು. ಈಶ್ವರೀಯ ವಿಶ್ವವಿದ್ಯಾಲಯ ಹುಬ್ಬಳ್ಳಿ ವಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ನಿರ್ಮಲಾಜೀ ಅಧ್ಯಕ್ಷತೆ ವಹಿಸಲಿದ್ದು, ಶಿರಸಿ ಕೇಂದ್ರದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ವೀಣಾಜೀ ಪ್ರಾಸ್ತಾವಿಕ ನುಡಿಗಳನ್ನಾಡುವರು.

ಶಾಸಕ ಬಿ.ಪಿ ಹರೀಶ್, ಮಾಜಿ ಶಾಸಕ ರಾದ ಹೆಚ್.ಎಸ್. ಶಿವಶಂಕರ್, ಎಸ್.ರಾಮಪ್ಪ, ಹಿರಿಯ ವೈದ್ಯ ಡಾ. ಎಂ.ಹನುಮಂತಪ್ಪ, ಬಿ.ಎಂ. ಕರೇಗೌಡ್ರು (ಬೆಂಗಳೂರು), ಅಕ್ಕಿ ಉದ್ಯಮಿ ಬಿ.ಕೆ. ಪಂಚಪ್ಪ, ಹಾಲಿವಾಣದ ಎಸ್.ಜಿ. ಪರಮೇಶ್ವರಪ್ಪ, ಹೊಳೆಸಿರಿಗೆರೆಯ ಎನ್.ಜಿ. ನಾಗನಗೌಡ್ರು, ನಿವೃತ್ತ ಡಿಡಿಪಿಐ ಕೆ.ಬಿ. ರಾಮಲಿಂಗಪ್ಪ, ವರ್ತಕ ಹೆಚ್. ಎಸ್. ರುದ್ರಯ್ಯ ಅವರುಗಳು ನುಡಿ ನಮನ ಸಲ್ಲಿಸಲಿದ್ದಾರೆ.

ದಾವಣಗೆರೆ ಕೇಂದ್ರದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಕಾರ್ಯಕ್ರಮ ನಿರ್ವಹಣೆ ಮಾಡಲಿದ್ದಾರೆ ಎಂದು ಶಾಂತಾಜೀ ಮಾಹಿತಿ ನೀಡಿದರು.

ಪರಮಾತ್ಮನ ಸೇವೆಯೇ ಮಂಜುಳಾಜಿಯವರ ಬದುಕಾಗಿತ್ತು. ಅವರು ತಮ್ಮ ಸರಳತೆ, ಪ್ರೀತಿಯಿಂದ ಮಲೇಬೆನ್ನೂರು ಭಾಗದ ಜನರ ಹೃದಯ ಗೆದ್ದಿದ್ದಾರೆ. ಅವರು ಕಳೆದ 15 ವರ್ಷಗಳಿಂದ ಇಲ್ಲಿ ಸೇವೆ ಸಲ್ಲಿಸಿದ್ದು, ಮಲೇಬೆನ್ನೂರು, ಹೊಳೆಸಿರಿಗೆರೆ ಮತ್ತು ಹಾಲಿವಾಣದಲ್ಲಿ ಈಶ್ವರೀಯ ವಿವಿ ಕೇಂದ್ರಗಳಿಗೆ ಸುಸಜ್ಜಿತ ಕಟ್ಟಡ ನಿರ್ಮಾಣವಾಗಿರುವುದರಲ್ಲಿ ಮಂಜುಳಕ್ಕನವರ ಶ್ರಮ ಅಪಾರವಾಗಿದೆ ಎಂದು ಬಿ.ಪಂಚಪ್ಪ ತಿಳಿಸಿದರು.

ವೈ.ಎನ್. ಹೊಸಕೋಟೆ ಕೇಂದ್ರದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ರಾಜಶ್ರೀ, ಹೆಚ್.ಎಸ್. ರುದ್ರಯ್ಯ, ಜಿಗಳಿ ಇಂದೂಧರ್, ಪೂಜಾರ್ ರೇವಣಪ್ಪ, ಕೆ.ಪಿ. ಕೆಂಚಪ್ಪ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

# ಭಯೋತ್ಪಾದಕ ವಿರೋಧಿ ದಿನಾಚರಣೆ, ಅಧಿಕಾರಿಗಳಿಂದ ಪ್ರತಿಜ್ಞಾ ವಿಧಿ ಸ್ವೀಕಾರ



ದಾವಣಗೆರೆ, ಮೇ 21- ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಇಂದು ಭಯೋತ್ಪಾದಕ ವಿರೋಧಿ ದಿನದ ಪ್ರಯುಕ್ತ ಅಧಿಕಾರಿಗಳು ಮತ್ತು ಸಿಬ್ಬಂದಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಈ ವೇಳೆ ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಅವರು ಪ್ರತಿಜ್ಞಾ ವಿಧಿ ಬೋಧಿಸಿದರು. ಅಹಿಂಸೆ ಹಾಗೂ ಸಹನೆಗೆ ಹೆಸರಾದ ನಮ್ಮ ರಾಷ್ಟ್ರದ ಭವ್ಯ ಪರಂಪರೆಯಲ್ಲಿ ದೃಢ ವಿಶ್ವಾಸವುಳ್ಳ ಭಾರತದ ಪ್ರಜೆಗಳಾದ ನಾವು, ಎಲ್ಲ ಬಗೆಯ ಭಯೋತ್ಪಾದನೆ ಮತ್ತು ಹಿಂಸೆಯನ್ನು ನಮ್ಮೆಲ್ಲ ಶಕ್ತಿ, ಸಾಮರ್ಥ್ಯದಿಂದ ಎದುರಿಸುತ್ತೇವೆ. ನಮ್ಮ ಸಹಬಾಂಧವರಲ್ಲಿ ಶಾಂತಿ, ಸಾಮಾಜಿಕ ಸೌಹಾರ್ದತೆ ಮತ್ತು ಪರಸ್ಪರ ಅರಿವನ್ನು ಸಾಧಿಸಲು ಹಾಗೂ ಉತ್ತೇಜಿಸಲು, ಮಾನವ ಜೀವಕ್ಕೆ ಹಾಗೂ ಮೌಲ್ಯಗಳಿಗೆ ಬೆದರಿಕೆ ಒಡ್ಡುತ್ತಿರುವ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಲು ಪಣ ತೊಡುತ್ತೇವೆ ಎಂದು ಪ್ರತಿಜ್ಞೆ ಸ್ವೀಕರಿಸಲಾಯಿತು. ಅಪರ ಜಿಲ್ಲಾಧಿಕಾರಿ ಸೈಯ್ಯದಾ ಆಫ್ರಿನ್ ಭಾನು ಎಸ್.ಬಳ್ಳಾರಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಸಿದ್ದರಾಮ್ ಮಾರಿಹಾಳ್, ಡಿಡಿಎಲ್‌ಆರ್ ಭಾವನಾ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

## ನಗರದಲ್ಲಿ ನಾಳೆಯಿಂದ ಜೀವನ ಕಲೆ ಶಿಬಿರ



ದಾವಣಗೆರೆ, ಮೇ 21-ಗುರುದೇವ ಶ್ರೀ ರವಿಶಂಕರ್ ಅವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಮಕ್ಕಳು ಮತ್ತು ಹದಿಹರೆಯದವರಿಗಾಗಿ ಜೀವನ ಕಲೆಯ ಬೇಸಿಗೆ ಕಾರ್ಯಕ್ರಮವು ವಿಜಯನಗರ ಬಡಾವಣೆ, ಹೊಸ ಆರ್‌ಟಿಓ ಹತ್ತಿರ, ವರ್ತುಲ ರಸ್ತೆ, # 1512/5152 ಇಲ್ಲಿ ನಾಳೆ ದಿನಾಂಕ 23ರ ಗುರುವಾರದಿಂದ ಇದೇ ದಿನಾಂಕ 26ರವರೆಗೆ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2 ಹಾಗೂ ಸಂಜೆ 4.30 ರಿಂದ 7 ಗಂಟೆಯವರೆಗೆ 2 ಬ್ಯಾಚುಗಳಲ್ಲಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 99005 01877, 77601 55659.


# ಅಂತರ್ಜಾಲದಲ್ಲಿ ಸ್ಪಾಮ್ ನಂತರ ಈಗ ಸ್ಲಾಪ್ ಕಾಟ

## ಎಐ ಕಾರಣದಿಂದ ಇಂಟರ್‌ನೆಟ್‌ನಲ್ಲಿ ಹರಡಿದ ಅನುಪಯುಕ್ತ ಮಾಹಿತಿ

ನವದೆಹಲಿ, ಮೇ 21 - ಹುಲು ಮಾನವ ಏನೇ ಆವಿಷ್ಕಾರ ಮಾಡಿದರೂ, ಅದರಲ್ಲೊಂದಿಷ್ಟು ಸಮಸ್ಯೆ ನುಸುಳೇ ನುಸುಳುತ್ತವೆ. ಇದಕ್ಕೆ ಕೃತಕ ಬುದ್ಧಿವಂತಿಕೆ (ಎ.ಐ.) ಹೊರತಾಗಿಲ್ಲ. ಕೃತಕ ಬುದ್ಧಿವಂತಿಕೆಯ ಪ್ರಚಲಿತವಾಗುತ್ತಿರುವಂತೆಯೇ ಅಂತರ್ಜಾಲದಲ್ಲಿ 'ಸ್ಲಾಪ್' ಎಂಬ ಹೊಸ ಸಮಸ್ಯೆ ಉದ್ಭವಿಸಿದೆ.

ಇಂಗ್ಲಿಷ್‌ನಲ್ಲಿ ಸ್ಲಾಪ್ ಎಂದರೆ ಸಪ್ಪೆ ಆಹಾರ ಎಂಬ ಅರ್ಥ ಬರುತ್ತದೆ. ಅರ್ಥಹೀನ ಹಾಗೂ ಅನುಪಯುಕ್ತ ಮಾಹಿತಿಯನ್ನು ಕೃತಕ ಬುದ್ಧಿವಂತಿಕೆ ಮೂಲಕ ರೂಪಿಸಿ ಅದನ್ನು ಅಂತರ್ಜಾಲದಲ್ಲಿ ಹರಡಿ ಅಂದಗೆಡಿಸುವುದನ್ನು ಟೆಕ್ ಪರಿಣಿತರು ಈಗ ಸ್ಲಾಪ್ ಎಂದು ಬಣ್ಣಿಸುತ್ತಿದ್ದಾರೆ.

ಕೃತಕ ಬುದ್ಧಿವಂತಿಕೆಯನ್ನು ಸ್ವಯಂ ಬಳಕೆಗೆ ಅನುಕೂಲವಾಗುವಂತೆ ಕಂಪನಿಗಳು ರೂಪಿಸುತ್ತಿವೆ. ಆದರೆ, ಕೆಲ ಮಹಾಶಯರು ಕೃತಕ ಬುದ್ಧಿವಂತಿಕೆಯ ಚಿತ್ರ, ಲೇಖನ ಇತ್ಯಾದಿಗಳನ್ನು ಅಂತರ್ಜಾಲದಲ್ಲಿ ಹರಡಿ ಜನರಿಗೆ ಕಿರಿಕಿರಿ ನೀಡುತ್ತಿದ್ದಾರೆ.






ಅನಗತ್ಯವಾದ ಇ-ಮೇಲ್‌ಗಳು ಬಂದು ಮೇಲ್ ಬಾಕ್ಸ್ ತುಂಬಿಕೊಂಡರೆ ಕೆಲಸ ಮಾಡುವುದೇ ಕಷ್ಟವಾಗುತ್ತದೆ. ಅದೇ ರೀತಿಯ ಪರಿಣಾಮ ಸ್ಲಾಪ್ ಮೂಲಕ ಅಂತರ್ಜಾಲದಲ್ಲಿ ಅನಗತ್ಯ ಹಾಗೂ ಅನುಪಯುಕ್ತ ಮಾಹಿತಿ ಸೇರಿಕೊಳ್ಳುತ್ತಿದೆ.

ಈ ಸ್ಲಾಪ್ ಮಾಹಿತಿ ಜನರ ಯಾವುದೇ ಸಮಸ್ಯೆಗೆ ಉತ್ತರ ನೀಡುವುದಿಲ್ಲ. ಯಾವುದೇ ಹೊಸ ಮಾಹಿತಿ ನೀಡುವುದಿಲ್ಲ. ಸ್ಲಾಪ್ ಮಾಹಿತಿಯನ್ನು ಮನುಷ್ಯರೇ ರೂಪಿಸಿದ್ದು ಎಂದು ಬಿಂಬಿಸಿ ದಾರಿ ತಪ್ಪಿಸಲಾಗುತ್ತದೆ. ಹಲವು ವೆಬ್‌ತಾಣಗಳಲ್ಲಿ ಸ್ಲಾಪ್ ಮಾಹಿತಿಯನ್ನೇ ತುಂಬಿ ಜಾಹೀರಾತು ಮೂಲಕ ಆದಾಯ ಗಳಿಸುವ ಪ್ರಯತ್ನ ನಡೆಸಲಾಗುತ್ತಿದೆ.

ಎ.ಐ. ತಂತ್ರಜ್ಞಾನದ ಮೂಲಕ ಸ್ವಯಂ ಚಾಲಿತವಾಗಿ ಮಾಹಿತಿ, ಚಿತ್ರ, ವಿಡಿಯೋ ಇತ್ಯಾದಿ ರೂಪಿಸುವುದು ಚಿಟಿಕೆ ಹೊಡೆದಷ್ಟೇ ಸುಲಭವಾಗುತ್ತಿದೆ. ಈ ಮಾಹಿತಿಯನ್ನು ಅಂತರ್ಜಾಲದಲ್ಲಿ ಬೇಜವಾಬ್ದಾರಿಯಿಂದ ಹರಡಲಾಗುತ್ತಿದೆ. ಕೆಲವರು ದಾರಿ ತಪ್ಪಿ ಇಂತಹ ಮಾಹಿತಿ ಇರುವ ವೆಬ್ ತಾಣಕ್ಕೆ ಬಂದರೂ ಸಹ, ವೆಬ್ ತಾಣ ರೂಪಿಸಿದವರಿಗೆ ಒಂದಿಷ್ಟು ಆದಾಯ ಸಿಗುತ್ತದೆ.

ಈಗಾಗಲೇ ಸ್ಪಾಮ್ ಅನ್ನು ಕೆಡುಕು ಎಂದು ಗುರುತಿಸಲಾಗಿದೆ. ಸ್ಲಾಪ್ ಅನ್ನೂ ಸಹ ಅದೇ ವರ್ಗಕ್ಕೆ ಶೀಘ್ರದಲ್ಲೇ ಸೇರಿಸಬೇಕಿದೆ ಎಂದು ಡೆವಲಪರ್ ಸೈಮನ್ ವಿಲ್ಲಿಸನ್ ಅಭಿಪ್ರಾಯ ಪಟ್ಟಿದ್ದಾರೆ. ಕೃತಕ ಬುದ್ಧಿವಂತಿಕೆಯ ಸ್ಲಾಪ್ ಅವಾಂತರವನ್ನು ಮೊದಲು ಗುರುತಿಸಿದವರಲ್ಲಿ ವಿಲ್ಲಿಸನ್ ಸಹ ಒಬ್ಬರು.

ಇಷ್ಟು ಸಾಲದು ಎಂಬಂತೆ, ಸ್ಲಾಪ್ ಮಾಹಿತಿ ಸಾಕಷ್ಟು ಬಾರಿ ದಾರಿ ತಪ್ಪಿಸುವಂತಿರುತ್ತದೆ. ಮೈಕ್ರೋಸಾಫ್ಟ್‌ನ ಎ.ಐ. ಬಳಸಿಕೊಂಡು ಲೇಖನವೊಂದನ್ನು ರೂಪಿಸಲಾಗಿತ್ತು. ಕೆನಡಾದ ರಾಜಧಾನಿಯಲ್ಲಿ ಒಟ್ಟಾವಾ ಫುಡ್ ಬ್ಯಾಂಕ್ ಇದೆ, ಅದು ನೋಡಲೇ ಬೇಕಾದ ತಾಣ ಎಂದು ತಪ್ಪು ಮಾಹಿತಿ ನೀಡಲಾಗಿತ್ತು.

ಎ.ಐ. ಮೂಲಕ ರೂಪಿಸಲಾದ ಪುಸ್ತಕಗಳೂ ಸಮಸ್ಯೆಗೆ ಕಾರಣವಾಗುತ್ತಿವೆ. ಅಮೆಜಾನ್‌ನಲ್ಲಿ ಚಾಟ್‌ಬಾಟ್‌ಗಳ ಮೂಲಕ ರೂಪಿಸಲಾದ ಪುಸ್ತಕಗಳನ್ನು ಮಾರಲಾಗುತ್ತಿದೆ. ಇವುಗಳಲ್ಲಿರುವ ಮಾಹಿತಿ ಕೆಲವೊಮ್ಮೆ ಅಪಾಯಕಾರಿಯೂ ಆಗಿದೆ.

ಮಾನವ ರೂಪಿತ ಮಾಹಿತಿ ಹಾಗೂ ಎ.ಐ. ಮೂಲಕ ರೂಪಿಸಲಾದ ಮಾಹಿತಿಯನ್ನು ಬೇರ್ಪಡಿಸುವ ವ್ಯವಸ್ಥೆಯ ಅಗತ್ಯವಿದೆ. ಜನ ಸಾಮಾನ್ಯರಿಗೆ ಯಾವುದು ನೈಜ ಹಾಗೂ ಯಾವುದು ಕೃತಕ ಎಂಬುದು ಗೊತ್ತಾಗದ ಪರಿಸ್ಥಿತಿಯಾಗುತ್ತಿದೆ ಎಂದು ಮೆಟಾ ಕಂಪನಿಯ ಜಾಗತಿಕ ವ್ಯವಹಾರಗಳ ಅಧ್ಯಕ್ಷ ನಿಕ್ ಕ್ಲೆಗ್ ಹೇಳಿದ್ದರು.

ಈ ಹಿಂದೆ ಇ-ಮೇಲ್‌ಗಳಲ್ಲಿ ದೊಡ್ಡ ಪ್ರಮಾಣದ ಸ್ಪಾಮ್‌ಗಳು ತುಂಬಿಕೊಳ್ಳುತ್ತಿದ್ದವು. ಈ ಸಮಸ್ಯೆ ಬಗೆಹರಿಸಲು ಟೆಕ್ ಉದ್ಯಮ ದೊಡ್ಡ ಪ್ರಯತ್ನ ನಡೆಸಬೇಕಾಯಿತು. ಜಿಮೇಲ್ ರೀತಿಯ ಕಂಪನಿಗಳು ಸ್ಪಾಮ್‌ಗಳ ಮೇಲೆ ಕಠಿಣ ಕಡಿವಾಣ ಹಾಕಿದ್ದವು.

ಈಗ ಸ್ಲಾಪ್ ವಿರುದ್ಧವೂ ಕಂಪನಿಗಳು ದೊಡ್ಡ ಮಟ್ಟದಲ್ಲಿ ತೋಳೇರಿಸಿ ನಿಂತಿವೆ. ಗೂಗಲ್ ತನ್ನ ಶೋಧಕದಲ್ಲಿ ಎ.ಐ. ಮಾಹಿತಿ ಹಾಗೂ ಸಾಮಾನ್ಯ ಮಾಹಿತಿಯನ್ನು ಪ್ರತ್ಯೇಕಿಸಿ ನೀಡುತ್ತಿದೆ. ಜೊತೆಗೆ, ಕೃತಕ ಬುದ್ಧಿವಂತಿಕೆ ಮೂಲಕ ರೂಪಿಸಲಾದ ಚಿತ್ರ, ಮಾಹಿತಿ ಹಾಗೂ ವಿಡಿಯೋಗಳ ಮೇಲೆ ಎ.ಐ. ಮುದ್ರೆ ಹಾಕಲು ಕ್ರಮ ತೆಗೆದುಕೊಳ್ಳುತ್ತಿದೆ. ಯೂಟ್ಯೂಬ್‌ನಲ್ಲಿ ವಿಡಿಯೋ ಪ್ರಕಟಿಸುವವರು ಎ.ಐ. ಬಳಸಿದ್ದರೆ ಆ ಬಗ್ಗೆ ತಿಳಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಎ.ಐ. ಬಳಕೆಯಲ್ಲಿ ಸುರಕ್ಷತಾ ಮಾನದಂಡ ಅನುಸರಿಸಲಾಗುತ್ತಿದೆ ಎಂದು ತಿಳಿಸಲಾಗಿದೆ.

ಆದರೆ, ಉಳಿದಂತೆ ಅಂತರ್ಜಾಲದಲ್ಲಿ ಎ.ಐ. ಸ್ಲಾಪ್ ಹರಡುತ್ತಲೇ ಇದೆ. ಈ ಬಗ್ಗೆ ಮುಂದಿನ ದಿನಗಳಲ್ಲಿ ಟೆಕ್ ವಲಯದ ದೈತ್ಯ ಕಂಪನಿಗಳು ತೆಗೆದುಕೊಳ್ಳುವ ಕ್ರಮಗಳ ಮೇಲೆ, ಎ.ಐ. ದುಷ್ಪರಿಣಾಮದ ಹಣೆ ಬರಹ ನಿರ್ಧಾರವಾಗಲಿದೆ.

# ಅಧ್ಯಕ್ಷ ಇಬ್ರಾಹಿಂ ರೈಸಿ ನಂತರ ಇರಾನ್ ರಾಜಕೀಯ ಸಮಸ್ಯೆ ಉಲ್ಬಣ ?

ನವದೆಹಲಿ, ಮೇ 21 - ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ ಅವರು ಹೆಲಿಕಾಪ್ಟರ್ ಪತನದಲ್ಲಿ ನಿಧನರಾಗಿರುವುದು ಇರಾನ್ ರಾಜಕೀಯ ಸಮಸ್ಯೆಗಳು ಮತ್ತಷ್ಟು ಹೆಚ್ಚುವಂತೆ ಮಾಡಿವೆ.

ರಾಜಕೀಯ ವಲಯದಲ್ಲಿ ಪ್ರಮುಖರಾಗಿದ್ದ ರೈಸಿ, ದೇಶೀಯ ರಾಜಕೀಯದ ಮೇಲೆ ಸಾಕಷ್ಟು ಹಿಡಿತ ಹೊಂದಿದ್ದರು. ಮಧ್ಯ ಪ್ರಾಚ್ಯದಲ್ಲಿ ಇತ್ತೀಚೆಗೆ ನಡೆದ ಬೆಳವಣಿಗೆಗಳಲ್ಲಿ ಅವರು ಮಹತ್ವದ ಪಾತ್ರ ವಹಿಸಿದ್ದರು.

ಪ್ರಭಾವಿ ನಾಯಕನ ಅನುಪಸ್ಥಿತಿಯಲ್ಲಿ ದೇಶದಲ್ಲಿ ಯಾವ ರೀತಿಯ ಬೆಳವಣಿಗೆ ಆಗಲಿದೆ ಹಾಗೂ ಪ್ರಾಂತೀಯ ಸಂಬಂಧಗಳ ಮೇಲೆ ಯಾವ ಪರಿಣಾಮವಾಗಲಿದೆ ಎಂಬ ಪ್ರಶ್ನೆಗಳು ಈಗ ಹುಟ್ಟಿಕೊಂಡಿವೆ.

ರೈಸಿ ಸರ್ಕಾರ ಸಾಂಪ್ರದಾಯಿಕ ಧೋರಣೆ ಹೊಂದಿತ್ತು. ಇರಾನ್ ಸರ್ವೋಚ್ಛ ನಾಯಕ ಆಯತೊಲ್ಲಾ ಅಲಿ ಖಮೇನಿ ಜೊತೆ ನಿಕಟ ಸಂಬಂಧ ಹೊಂದಿತ್ತು. ಉಭಯರ ನಡುವೆ ಯಾವುದೇ ಭಿನ್ನಮತ ಇರಲಿಲ್ಲ. ಈ ಹಿಂದಿನ ಸರ್ಕಾರಗಳಲ್ಲಿ ಇಷ್ಟು ಉತ್ತಮ ಹೊಂದಾಣಿಕೆ ಕಂಡು ಬಂದಿರಲಿಲ್ಲ.

85 ವರ್ಷದ ಖಮೇನಿ ನಂತರದಲ್ಲಿ ರೈಸಿ ಅವರೇ ಇರಾನ್ ಸರ್ವೋಚ್ಛ ನಾಯಕರಾಗಲಿದ್ದಾರೆ ಎಂದು ಭಾವಿಸಲಾಗಿತ್ತು. ಕಳೆದ 35 ವರ್ಷಗಳಿಂದ ಖಮೇನಿ ದೇಶದ ನೇತೃತ್ವ ವಹಿಸಿದ್ದಾರೆ.

ಸಾಂಪ್ರದಾಯಿಕ ನಿಲುವಿನ ರೈಸಿ, ಇರಾನ್ ಭವಿಷ್ಯದ ನಾಯಕತ್ವ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದ್ದಾರೆ ಎಂಬ ನಂಬಿಕೆ ಇತ್ತು. ಆದರೆ, ಎರಡನೇ ಅವಧಿ ಪೂರ್ಣಗೊಳ್ಳುವ ಮುನ್ನವೇ ಅವರು ನಿಧನರಾಗಿದ್ದಾರೆ. ಇರಾನ್‌ನ ಆಂತರಿಕ, ಪ್ರಾಂತೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಹಲವು ಸವಾಲುಗಳನ್ನು ಎದುರಿಸುತ್ತಿದೆ.



ಅಣು ಕಾರ್ಯಕ್ರಮದ ಹಿನ್ನೆಲೆಯಲ್ಲಿ ಇರಾನ್ ಮೇಲೆ ಅಮೆರಿಕ ಹಲವಾರು ನಿರ್ಬಂಧಗಳನ್ನು ಹೇರಿದೆ. ಇದರಿಂದ ಆರ್ಥಿಕತೆಗೆ ಅಪಾರ ಹಾನಿಯಾಗಿದೆ ಹಾಗೂ ಜನರ ಜೀವನ ಸಂಕಷ್ಟಕ್ಕೆ ಸಿಲುಕಿದೆ.

ನೈತಿಕ ಪೊಲೀಸ್ ವಿವಾದದ ಹಿನ್ನೆಲೆಯಲ್ಲಿ 22 ವರ್ಷದ ಮಹ್ಸ ಆಮಿನಿ ಅವರ ನಿಧನದ ನಂತರ ದೇಶ ತೀವ್ರ ಪ್ರತಿಭಟನೆಗಳನ್ನೂ ಎದುರಿಸಿತ್ತು. ಆರ್ಥಿಕ ಬಿಕ್ಕಟ್ಟು ಹಾಗೂ ಸರ್ಕಾರದ ನೀತಿಗಳಿಗೆ ಸಂಬಂಧಿಸಿದಂತೆ ಸ್ಥಳೀಯವಾಗಿ ಪ್ರತಿಭಟನೆಗಳೂ ನಡೆದಿದ್ದವು.

ಕಳೆದ ಮಾರ್ಚ್ ತಿಂಗಳಲ್ಲಿ ನಡೆದ ಸಂಸದೀಯ ಚುನಾವಣೆಯಲ್ಲಿ ಅತ್ಯಂತ ಕಡಿಮೆ ಮತದಾನವಾಗಿತ್ತು. ಇಸ್ರೇಲ್ ಜೊತೆ ನಡೆಸುತ್ತಿರುವ ಪರೋಕ್ಷ ಸಮರವು ಆಂತರಿಕ ಭದ್ರತೆಯ ಕಳವಳವನ್ನೂ ತಂದಿದೆ.

ರೈಸಿ ಅವರ ಹೆಲಿಕಾಪ್ಟರ್ ಪತನದ ಹಿಂದೆ ಎಲೆಕ್ಟ್ರಾನಿಕ್ ಸಮರ, ಡ್ರೋನ್ ದಾಳಿ ಇಲ್ಲವೇ ಇಸ್ರೇಲ್ ನೆಲದಿಂದ ನಡೆದ ದಾಳಿ ಕಾರಣ ಎಂಬ ಬಗ್ಗೆ ಸಾಕಷ್ಟು ಗಾಳಿ ಸುದ್ದಿ ಹಾಗೂ ಸಂಚಿನ ಗುಮಾನಿಗಳು ಹರಡಿವೆ. ಇರಾನ್‌ನ ಸರ್ಕಾರಿ ಸುದ್ದಿ ಸಂಸ್ಥೆ ಮಾತ್ರ ತಾಂತ್ರಿಕ ವೈಫಲ್ಯದಿಂದ ಹೆಲಿಕಾಪ್ಟರ್ ಪತನವಾಗಿದೆ ಎಂದು ತಿಳಿಸಿದೆ.


ಈ ಸವಾಲುಗಳ ಹೊರತಾಗಿಯೂ, ದೇಶದ ಸ್ಥಿರತೆಯ ಮೇಲೆ ಹೆಚ್ಚೇನೂ ಪರಿಣಾಮವಾಗುವ ಸಾಧ್ಯತೆ ಇಲ್ಲ. ಇರಾನ್ ರಾಜಕೀಯ ವ್ಯವಸ್ಥೆಯು ಸರ್ವೋಚ್ಛ ನಾಯಕ ಖಮೇನಿ ಹಿಡಿತದಲ್ಲಿದೆ. ಅವರ ನಿಯಂತ್ರಣದಲ್ಲಿ ಉಳಿದ ವ್ಯವಸ್ಥೆಗಳು ಕಾರ್ಯನಿರ್ವಹಿಸುತ್ತವೆ. ಹೀಗಾಗಿ ಒಬ್ಬ ಪ್ರಮುಖ ನಾಯಕನ ಅನುಪಸ್ಥಿತಿ ಶೂನ್ಯವನ್ನು ಸೃಷ್ಟಿಸದು ಎಂಬ ವಾದಗಳೂ ಇವೆ.

ಉಪಾಧ್ಯಕ್ಷ ಮೊಹಮ್ಮದ್ ಮೊಖಬೇರ್ ಅವರು ಮುಂದಿನ ಚುನಾವಣೆಯವರೆಗೂ ಹಂಗಾಮಿ ಅಧ್ಯಕ್ಷರಾಗಿ ಮುಂದುವರೆಯಲಿದ್ದಾರೆ. ಖಮೇನಿ ನಿಕಟವರ್ತಿಯಾಗಿರುವ ಸಂಪ್ರದಾಯವಾದಿ ನಾಯಕ ನೂತನ ಅಧ್ಯಕ್ಷರಾಗುವ ಸಾಧ್ಯತೆ ಇದೆ.

ರೈಸಿಗೆ ಮುಂಚೆ ಅಧಿಕಾರದಲ್ಲಿದ್ದ ಹಸನ್ ರೌಹಾನಿ ಅವರು ಯುರೋಪ್ ದೇಶಗಳ ಜೊತೆ ಸಂಬಂಧ ಸುಧಾರಿಸಿದ್ದರು. ಪಶ್ಚಿಮದ ಜೊತೆ ಉತ್ತಮ ಸಂಬಂಧ ಹೊಂದಿದ್ದರು. ಆದರೆ, ರೈಸಿ ಅವರು ಮಧ್ಯಪ್ರಾಚ್ಯಕ್ಕೆ ಹೆಚ್ಚು ಆದ್ಯತೆ ನೀಡಿದ್ದರು. 2023ರಲ್ಲಿ ಇರಾನ್ ಹಾಗೂ ಸೌದಿ ಅರೇಬಿಯಾದ ನಡುವೆ ಐತಿಹಾಸಿಕ ಸಂಧಾನ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಯೆಮನ್ ಜೊತೆಗಿನ ಸುದೀರ್ಘ ಕಾಲದ ಅಂತರ್ಯುದ್ಧ ಅಂತ್ಯವಾಗಿತ್ತು. ಸಿರಿಯಾ ಹಾಗೂ ಇರಾಕ್‌ಗಳ ಜೊತೆಗಿನ ಸಂಬಂಧ ಸಾಮಾನ್ಯವಾಗಿತ್ತು.

ಜೋರ್ಡಾನ್ ಹಾಗೂ ಈಜಿಪ್ಟ್ ಜೊತೆಗೂ ಇರಾನ್ ಸುದೀರ್ಘ ಸಂಧಾನ ನಡೆಸಿತ್ತು. ಈ ಸಂಧಾನಕ್ಕೆ ಇರಾಕ್ ನೆರವಾಗಿತ್ತು. ಇದರಿಂದ ಸುದೀರ್ಘ ಕಾಲದಿಂದ ಈ ವಲಯದಲ್ಲಿದ್ದ ಅಂತರ್‌ಕಲಹ ಬಗೆಹರಿದು, ಹೆಚ್ಚಿನ ಸಹಕಾರದ ನಿರೀಕ್ಷೆ ಇತ್ತು. ರೈಸಿ ಆಡಳಿತದಲ್ಲಿ ಚೀನಾ ಹಾಗೂ ರಷ್ಯಾಗೆ ಇರಾನ್ ಹತ್ತಿರವಾಗಿತ್ತು. ನೂತನ ಅಧ್ಯಕ್ಷರ ಅವಧಿಯಲ್ಲೂ ಇರಾನ್ ನೀತಿ ಇದೇ ಹಾದಿಯಲ್ಲಿ ಮುಂದುವರೆಯುವ ಸಾಧ್ಯತೆ ಇದೆ.

## ನಗರದಲ್ಲಿ ನಾಳೆ ಸಿದ್ಧ ಕಣ್ಣಿನ ಹನಿ



ದಾವಣಗೆರೆ, ಮೇ 21- ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ನಾಡಿದ್ದು ದಿನಾಂಕ 23ರ ಗುರುವಾರ ಬೆಳಿಗ್ಗೆ 10 ರಿಂದ 12 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ. ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು.

ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಬಿ.ಎಸ್. ವೀರೇಶ್ (88676 - 91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಅವರನ್ನು ಸಂಪರ್ಕಿಸಬಹುದು.

## ರಾಂಪುರದಲ್ಲಿ ಇಂದು ಶ್ರೀ ಪುಣ್ಯಾರಾಧನೆ

ಹೊನ್ನಾಳಿ ತಾಲ್ಲೂಕಿನ ರಾಂಪುರ ಗ್ರಾಮದ ಶ್ರೀ ಹಾಲಸ್ವಾಮಿ ಬೃಹನ್ಮಠದಲ್ಲಿ ಲಿಂ. ಶ್ರೀಗಳ ಪುಣ್ಯಾರಾಧನೆ ಇಂದು ನಡೆಯಲಿದೆ. ಹಿರೇಕಲ್ಮಠದ ಒಡೆಯರ್ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಶ್ರೀಗಳ ನೇತೃತ್ವದಲ್ಲಿ ರುದ್ರಾಭಿಷೇಕ, ವಿಶೇಷ ಪೂಜಾ ಕೈಂಕರ್ಯಗಳು ನಡೆಯಲಿವೆ ಎಂದು ರಾಂಪುರ ಮಠದ ಶಿವಕುಮಾರ ಹಾಲ ಸ್ವಾಮೀಜಿ ತಿಳಿಸಿದ್ದಾರೆ.


# ಪ್ರಥಮ ವರ್ಷದ ಪುಣ್ಯಸ್ಮರಣೆ



ದಾವಣಗೆರೆ ತಾಲ್ಲೂಕು ದೊಡ್ಡಬಾತಿ ವಾಸಿ, ಮಲ್ಲಾರಪ್ಪರ

**ಶ್ರೀ ಎಸ್. ಸಿದ್ದಪ್ಪನವರ**

ಧರ್ಮಪತ್ನಿ

**ದಿ|| ಶ್ರೀಮತಿ ಎಸ್. ಗಂಗಮ್ಮ**

*'ನೀವು ನಮ್ಮನ್ನೆಲ್ಲಾ ಅಗಲಿ ಇಂದಿಗೆ ಒಂದು ವರ್ಷವಾಯಿತು...*
*ಇಂದಿಗೂ ನಿಮ್ಮ ನೆನಪು ನಮಗೆ ಚಿರನೂತನ.*
*ನಿಮ್ಮ ದಿವ್ಯಾತ್ಮದ ಬೆಳಕು ನಮಗೆ ಇಂದಿಗೂ ದಾರಿದೀಪ...*
*ನಮ್ಮನ್ನು ಸದಾ ಕೈ ಹಿಡಿದು ನಡೆಸಿ'...*

ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು
ಅಳಿಯಂದಿರು, ಸೊಸೆಯಂದಿರು
ಹಾಗೂ ಬಂಧು-ಮಿತ್ರರು.

# ಚುರುಕಾದ ಮುಂಗಾರು : ಉತ್ತಮ ಇಳುವರಿಗೆ ಇಲಾಖೆ ಸಲಹೆ

ದಾವಣಗೆರೆ, ಮೇ 21- ಜಿಲ್ಲೆಯಲ್ಲಿ ಮುಂಗಾರು ಹಂಗಾಮು ಚುರುಕಾಗಿದ್ದು, ರೈತರು ಮುಂಗಾರು ಬೆಳೆ ಬಿತ್ತನೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಅಧಿಕ ಇಳುವರಿ ಪಡೆಯಲು ಉತ್ತಮ ಬೀಜದ ಕೊಡುಗೆ ಅಪಾರವಾಗಿದೆ. 'ಬೆಳೆಯುವ ಸಿರಿ ಮೊಳಕೆಯಲ್ಲಿ'ಎಂಬ ನಾಣ್ನುಡಿಯಂತೆ ಉತ್ತಮ ಇಳುವರಿ ಪಡೆಯುವಲ್ಲಿ ಆರೋಗ್ಯವಂತ ಸಸಿಗಳ ಪಾತ್ರ ಪ್ರಮುಖವಾಗಿದೆ. ಆದ್ದರಿಂದ ಮಣ್ಣಿನಿಂದ ಹಾಗೂ ಬೀಜದಿಂದ ಹರಡುವ ರೋಗಗಳನ್ನು ತಡೆಗಟ್ಟಲು, ಸಾರಜನಕ ಮತ್ತು ರಂಜಕ ಪೋಷಕಾಂಶಗಳ ಲಭ್ಯತೆಯನ್ನು ಹೆಚ್ಚಿಸಲು ಬೀಜೋಪಚಾರ ಅವಶ್ಯಕ. ಮುಸುಕಿನಜೋಳ, ಶೇಂಗಾ, ತೊಗರಿ ಜಿಲ್ಲೆಯ ಮುಂಗಾರು ಹಂಗಾಮಿನ ಪ್ರಮುಖ ಬೆಳೆಗಳಾಗಿದ್ದು, ಬಿತ್ತನೆ ಕೈಗೊಳ್ಳುವ ಮುನ್ನ ರೈತ ಬಾಂಧವರು ಈ ಕೆಳಕಂಡ ತಾಂತ್ರಿಕತೆಗಳನ್ನು ಅನುಸರಿಸಲು ಕೋರಿದೆ.

**ಬೀಜೋಪಚಾರ :**

**ಮುಸುಕಿನ ಜೋಳ:** ಮುಸುಕಿನ ಜೋಳದ ಬೆಳೆಯಲ್ಲಿ ಎಕರೆಗೆ ಬೇಕಾಗುವ ಬಿತ್ತನೆ ಬೀಜಕ್ಕೆ 200 ಗ್ರಾಂ ಅಝೋಸ್ಪೈರಿಲಂ ಮತ್ತು 200 ಗ್ರಾಂ ರಂಜಕ ಕರಗಿಸುವ ಜೀವಾಣು ಗೊಬ್ಬರದೊಂದಿಗೆ ಬೀಜೋಪಚಾರ ಮಾಡುವುದು. ಬೂಜು ರೋಗ ಅಥವಾ ಕೇದಿಗೆ ರೋಗ ಕಂಡುಬರುವ ಪ್ರದೇಶದಲ್ಲಿ ಮೆಟಲಾಕ್ಸಿಲ್+ಮ್ಯಾಂಕೋಜೆಬ್ ಮಿಶ್ರಣವನ್ನು 3 ಗ್ರಾಂನಂತೆ ಪ್ರತಿ ಕಿ.ಗ್ರಾಂ ಬೀಜಕ್ಕೆ ಬೆರೆಸಿ ಬೀಜೋಪಚಾರ ಮಾಡುವುದು.

ಕಾಂಡಕೊರಕ ಬಾಧೆ ತಡೆಗೆ ಮುನ್ನೆಚ್ಚರಿಕೆ ಕ್ರಮವಾಗಿ ಪ್ರತಿ ಕಿ.ಗ್ರಾಂ ಬಿತ್ತನೆ ಬೀಜಕ್ಕೆ 10 ಮಿ.ಲೀ ಕ್ಲೋರೋಫೈರಿಫಾಸ್ 20 ಇ.ಸಿ ಅಥವಾ ಥಯೋಮಿತಾಕ್ಸೋಮ್ 25% 4 ಗ್ರಾಂ ಪ್ರತಿ ಕಿ.ಗ್ರಾಂ ಬಿತ್ತನೆ ಬೀಜಕ್ಕೆ ಹಾನಿಯಾಗದಂತೆ ಲೇಪಿಸಿ ಬಿತ್ತನೆ ಮಾಡುವುದು.





### ಬೀಜಾಮೃತ ತಯಾರಿಸುವ ವಿಧಾನ

* ಬಿತ್ತನೆ ಹಿಂದಿನ ದಿನ ತೆಳುವಾದ ಹತ್ತಿ ಬಟ್ಟೆಯಲ್ಲಿ 5 ಕೆ. ಜಿ. ಸಗಣಿಯನ್ನು ಕಟ್ಟಿ, 20 ಲೀ. ನೀರಿರುವ ಪ್ಲಾಸ್ಟಿಕ್ ಬಕೆಟ್ / ಡ್ರಮ್‌ನಲ್ಲಿ ತೂಗುಬಿಡಿ.
* ಒಂದು ಲೀ. ನೀರಿನಲ್ಲಿ 50 ಗ್ರಾಂ ಸುಣ್ಣವನ್ನು ಪ್ರತ್ಯೇಕವಾಗಿ ಬೆರೆಸಿ ತಿಳಿಯಾಗಲು ಬಿಡಿ.
* ಬಿತ್ತನೆ ಮಾಡುವ ದಿನ ಇಳಿಬಿಟ್ಟಿರುವ ಸಗಣಿ ಗಂಟನ್ನು ಚೆನ್ನಾಗಿ ಕಲಕಿಸಿ, ಐದಾರು ಬಾರಿ ಹಿಂಡಿ ತೆಗೆಯಿರಿ.
* ಸುಣ್ಣದ ತಿಳಿ, ಗಂಜಲ ಹಾಗೂ ಮಣ್ಣನ್ನು ಸಗಣಿ ತಿಳಿಗೆ ಹಾಕಿ ಚೆನ್ನಾಗಿ ಕಲೆಸಿ.
* ನಂತರ ಬೀಜಗಳನ್ನು ಒಂದು ನಿಮಿಷ ಮಾತ್ರ ಬೀಜಾಮೃತದಲ್ಲಿ ಮುಳುಗಿಸಿ ತೆಗೆಯಿರಿ, ನೆರಳಿನಲ್ಲಿ ಒಣಗಿಸಿ ತೇವ ಆರಿದ ನಂತರ ಬಿತ್ತನೆ ಮಾಡಬೇಕು.

**ನೆಲಗಡಲೆ:** ಬಿತ್ತನೆ ಮಾಡುವ ಮೊದಲು ಪ್ರತಿ ಕಿ.ಗ್ರಾಂ ನೆಲಗಡಲೆ ಬೀಜಕ್ಕೆ 5 ಗ್ರಾಂ ಟ್ರೈಕೋಡರ್ಮ ವಿರಿಡೆ ಅಥವಾ 2.5 ಗ್ರಾಂ ಥೈರಾಮ್ ಅನ್ನು ಬೆರೆಸಿ, ನೆರಳಿನಲ್ಲಿ ಒಣಗಿಸಬೇಕು, ನಂತರ ಒಂದು ಎಕರೆ ಬಿತ್ತನೆ ಬೀಜಕ್ಕೆ 150 ಗ್ರಾಂ ರೈಜೋಬಿಯಂ ಮತ್ತು 400 ಗ್ರಾಂ ಪಿ.ಎಸ್.ಬಿ ಜೈವಿಕ ಗೊಬ್ಬರಗಳನ್ನು ಅಂಟು ದ್ರಾವಣ ಬಳಸಿ ಉಪಚರಿಸಿ ಬಿತ್ತನೆಗೆ ಬಳಸಬೇಕು.

ಗೊಣ್ಣೆ ಹುಳುವಿನ ಬಾಧೆ ಇದ್ದಲ್ಲಿ ಪ್ರತಿ ಕಿ.ಗ್ರಾಂ ಬಿತ್ತನೆ ಬೀಜಕ್ಕೆ 10 ಮಿ.ಲೀ ಕ್ಲೋರೋಫೈರಿಫಾಸ್ 20 ಇ.ಸಿ ಯನ್ನು ಬೀಜಕ್ಕೆ ಹಾನಿಯಾಗದಂತೆ ಲೇಪಿಸಿ ಬಿತ್ತನೆ ಮಾಡುವುದು.

ಕತ್ತು ಕೊಳೆ ರೋಗದ ನಿರ್ವಹಣೆಗೆ ಪ್ರತಿ ಕಿ. ಗ್ರಾಂ ಬಿತ್ತನೆ ಬೀಜಕ್ಕೆ 2 ಗ್ರಾಂ ಕಾರ್ಬೆಂಡೈಜಿಂ ಅಥವಾ ಕ್ಯಾಪ್ಟಾನ್ ನ್ನು ಬೀಜೋಪಚಾರ ಮಾಡಿ ಬಿತ್ತುವುದು.

**ರಾಗಿ:** ಬೆಂಕಿ ರೋಗ/ ಇಳುಕು ರೋಗ ಮತ್ತು ಕಂದು ಚುಕ್ಕೆ ರೋಗದ ಹತೋಟಿಗೆ ಪ್ರತಿ ಕಿ.ಗ್ರಾಂ ಬಿತ್ತನೆ ಬೀಜಕ್ಕೆ 2 ಗ್ರಾಂ. ಕಾರ್ಬೆಂಡೈಜಿಂನಿಂದ ಉಪಚಾರ ಮಾಡಿ ಬಿತ್ತನೆ ಮಾಡುವುದು.

**ದ್ವಿದಳ ಬೆಳೆಗಳು:** ತೊಗರಿ, ಹೆಸರು, ಉದ್ದು, ಅವರೆ ಇತರೆ ದ್ವಿದಳ ಧಾನ್ಯಗಳನ್ನು ಬಿತ್ತುವ ಮೊದಲು 200 ಗ್ರಾಂ ರೈಜೋಬಿಯಂ ಮತ್ತು 200 ಗ್ರಾಂ ರಂಜಕ ಕರಗಿಸುವ ಜೀವಾಣು ಗೊಬ್ಬರದೊಂದಿಗೆ ಬೀಜೋಪಚಾರ ಮಾಡುವುದು.

ತೊಗರಿ ಬೆಳೆಯಲ್ಲಿ ಸೊರಗು ರೋಗದ ಹತೋಟಿಗೆ ಪ್ರತಿ ಕಿ. ಗ್ರಾಂ ಬಿತ್ತನೆ ಬೀಜಕ್ಕೆ 5 ಗ್ರಾಂ ಟ್ರೈಕೋಡರ್ಮಾ ವಿರಿಡೆ ಅಥವಾ 2 ಗ್ರಾಂ ಕಾರ್ಬೆಂಡೈಜಿಂ ಅನ್ನು ಬೀಜೋಪಚಾರ ಮಾಡಿ ಬಿತ್ತುವುದು. ಸಾವಯವ/ನೈಸರ್ಗಿಕ ಕೃಷಿ ಅನುಸರಿಸುತ್ತಿರುವ ಕೃಷಿಕರು ಬೀಜಾಮೃತ ತಯಾರಿಸಿಕೊಂಡು ಬೀಜೋಪಚಾರ ಮಾಡಬಹುದು

ಬೀಜಾಮೃತ ತಯಾರಿಕೆಗೆ ಬೇಕಾಗುವ ಸಾಮಗ್ರಿಗಳು: 20 ಲೀ. ನೀರು, 5 ಕೆ.ಜಿ. ದೇಸಿ ಹಸುವಿನ ಸಗಣಿ, 5 ಲೀಟರ್ ದೇಸಿ ಹಸುವಿನ ಗಂಜಲ, 50 ಗ್ರಾಂ ಸುಣ್ಣ, ಒಂದು ಬೊಗಸೆ ಜಮೀನಿನ ಫಲವತ್ತಾದ ಮಣ್ಣು.

ಬೀಜೋಪಚಾರ ಮಾಡುವಾಗ ಮೊದಲು ಶಿಲೀಂಧನಾಶಕ ನಂತರ ಕೀಟನಾಶಕ ಕೊನೆಯಲ್ಲಿ ಜೈವಿಕ ಗೊಬ್ಬರಗಳಿಂದ ಬೀಜೋಪಚಾರ ಮಾಡುವುದು ಸೂಕ್ತ ಎಂದು ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರು ಸಲಹೆ ನೀಡುತ್ತಾರೆ.

# ಶೀಘ್ರ ಸ್ಥಳೀಯ ಸಂಸ್ಥೆಗಳ ಚುನಾವಣೆ

(1ನೇ ಪುಟದಿಂದ) ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶೀಘ್ರದಲ್ಲೇ ಚುನಾವಣೆ ನಡೆಸಲಾಗುವುದು, ಪಕ್ಷದ ನಾಯಕರು, ಕಾರ್ಯಕರ್ತರು ಸಿದ್ಧರಾಗಿ ಎಂದು ಕರೆ ನೀಡಿದರು.

ತೆರವಾಗಿರುವ ಸ್ಥಳೀಯ ಸಂಸ್ಥೆಗಳಿಗೆ ಹಿಂದಿನ ಬಿಜೆಪಿ ಆಡಳಿತ ಚುನಾವಣೆ ನಡೆಸದೆ, ಜನರಿಗೆ ಇದ್ದ ಅಧಿಕಾರವನ್ನು ಕಸಿದುಕೊಂಡಿತ್ತು. ಇರುವ ಕಾನೂನು ತೊಡಕುಗಳನ್ನು ನಿವಾರಿಸಿ ನಾವು ಚುನಾವಣೆ ನಡೆಸುತ್ತೇವೆ, ನೀವು ರಾಜ್ಯ ಮತ್ತು ರಾಷ್ಟ್ರಮಟ್ಟದ ನಾಯಕರಾಗಲು ಈ ಚುನಾವಣೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಅಧಿಕಾರ ಪಡೆಯುವ ಜೊತೆಗೆ ಪಕ್ಷಕ್ಕೂ ನ್ಯಾಯ ದೊರಕಿಸಿ ಎಂದಿದ್ದಾರೆ. ನಾನು ಇನ್ನೆಷ್ಟು ದಿನ ಪ್ರದೇಶ ಕಾಂಗ್ರೆಸ್ ಅಧ್ಯಕ್ಷನಾಗಿರುತ್ತೇನೋ ಗೊತ್ತಿಲ್ಲ, ಅಷ್ಟರೊಳಗೆ ಪಕ್ಷಕ್ಕೆ ದುಡಿದ ಕಾರ್ಯಕರ್ತರಿಗೆ ಅಧಿಕಾರ ಕೊಡಿಸುತ್ತೇನೆ ಎಂದವರು ಹೇಳಿದ್ದಾರೆ.

ಸಂಘಟನೆ ಬಲಗೊಳಿಸಬೇಕು, ಪಕ್ಷದ ಎಲ್ಲಾ ಘಟಕಗಳನ್ನು ವಿಸರ್ಜಿಸಿ ಹೊಸದಾಗಿ ರಚಿಸುವ ಸಮಯ ಬಂದಿದೆ, ಮೊದಲು ಪಕ್ಷದ ಕೆಲಸ ಮಾಡಬೇಕು, ಕೇವಲ ಗುರುತಿನ ಚೀಟಿಗೋಸ್ಕರ ಬರುವವರು ಮನೆಯಲ್ಲಿಯೇ ಇರಿ ಎಂದರು.

ಖಾದಿ ಬಟ್ಟೆ ಹಾಕಿಕೊಂಡು, ಕಾರು ಇಟ್ಟುಕೊಂಡು ಎಂಎಲ್‌ಸಿ ಮಾಡಿ, ಅಧ್ಯಕ್ಷನನ್ನಾಗಿ ಮಾಡಿ ಎಂದರೆ ಅದು ಇಲ್ಲಿ ನಡೆಯುವುದಿಲ್ಲ. ಕೆಲಸ ಮಾಡುವವರಿಗೆ ಆದ್ಯತೆ. ನಿಮ್ಮ ಬೂತ್ ಮಟ್ಟದಲ್ಲಿ ಪಕ್ಷಕ್ಕೆ ಹೆಚ್ಚಿನ ಮತ ತಂದು ನಾಯಕತ್ವಕ್ಕೆ ಬೇಡಿಕೆ ಇಡಬೇಕು. ನಿಮ್ಮ ಬೂತ್‌ಗಳಲ್ಲಿ ಪಕ್ಷಕ್ಕೆ ಮುನ್ನಡೆ ತರಲು ಆಗದಿದ್ದರೆ ನಾವು ಬೇರೆಯವರನ್ನು ತಯಾರು ಮಾಡುತ್ತೇವೆ ಎಂದು ಎಚ್ಚರಿಸಿದರು.

# ಬ್ರಿಜ್ ಭೂಷಣ್ ವಿರುದ್ಧ ಆರೋಪ ಪಟ್ಟಿ

ನವದೆಹಲಿ, ಮೇ 21 – ಮಹಿಳಾ ಕುಸ್ತಿ ಪಟುಗಳನ್ನು ಲೈಂಗಿಕವಾಗಿ ಪೀಡಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಭಾರತೀಯ ಕುಸ್ತಿ ಒಕ್ಕೂಟದ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ದೆಹಲಿ ನ್ಯಾಯಾಲಯ ಆರೋಪ ಪಟ್ಟಿ ದಾಖಲಿಸಿದೆ. ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಪ್ರಿಯಾಂಕ ರಜಪೂತ್ ಅವರ ನ್ಯಾಯಾಲಯದಲ್ಲಿ ಆರೋಪ ಪಟ್ಟಿ ದಾಖಲಿಸಲಾಗಿದೆ.

ಒಕ್ಕೂಟದ ಮಾಜಿ ಸಹಾಯಕ ಕಾರ್ಯದರ್ಶಿ ವಿನೋದ್ ತೋಮರ್ ವಿರುದ್ಧ ಅಪರಾಧಿಕ ಬೆದರಿಕೆಯ ಆರೋಪ ದಾಖಲಿಸಲಾಗಿದೆ. ನಾನು ಯಾವುದೇ ತಪ್ಪು ಮಾಡಿಲ್ಲ ಎಂದು ಸಿಂಗ್ ನ್ಯಾಯಾಲಯದ ಎದುರು ಹೇಳಿಕೆ ನೀಡಿದ್ದಾರೆ.

# ಉತ್ತಮ ಮಳೆ, ಬಿತ್ತನೆಯತ್ತ ರೈತನ ಚಿತ್ತ

(1ನೇ ಪುಟದಿಂದ) ಚಿಂತನೆಯಲ್ಲಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 60,426 ಹೆಕ್ಟೇರ್, ಹರಿಹರ-32,280 ಹೆ., ಜಗಳೂರು- 57,418 ಹೆ., ಹೊನ್ನಾಳಿ-27,990 ಹೆ., ಚನ್ನಗಿರಿ; 46,194 ಹೆ. ಹಾಗೂ ನ್ಯಾಮತಿ ತಾಲ್ಲೂಕಿನಲ್ಲಿ 20,995 ಹೆಕ್ಟೇರ್ ಬಿತ್ತನೆ ಗುರಿ ಹೊಂದಲಾಗಿದೆ.

ಜಿಲ್ಲೆಯಲ್ಲಿ ಭತ್ತ 65847 ಹೆಕ್ಟೇರ್, ಮೆಕ್ಕೆಜೋಳ 126108 ಹೆಕ್ಟೇರ್, ತೊಗರಿ 13500 ಹೆಕ್ಟೇರ್, ಶೇಂಗಾ 13770 ಹೆಕ್ಟೇರ್, ಹತ್ತಿ 7292 ಹೆಕ್ಟೇರ್ ಸೇರಿದಂತೆ ಹಲವು ಬೆಳೆಗಳ ಗುರಿ ಹೊಂದಲಾಗಿದೆ.

ಜಿಲ್ಲೆಗೆ ಒಟ್ಟಾರೆ ಮುಂಗಾರು ಹಂಗಾಮಿಗೆ 153683 ಮೆಟ್ರಿಕ್ ಟನ್ ಹಾಗೂ ಮೇ ಮಾಹೆಗೆ 23,154 ಮೆಟ್ರಿಕ್ ಟನ್ ರಸಗೊಬ್ಬರಕ್ಕೆ ಬೇಡಿಕೆ ಇದೆ. 43646 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಇರುವುದಾಗಿ ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ತಿಳಿಸಿದ್ದಾರೆ.

ಮುಂಗಾರು ಹಂಗಾಮಿಗೆ 53,238 ಮೆಟ್ರಿಕ್ ಟನ್ ಯೂರಿಯಾ, 18,060 ಮೆಟ್ರಿಕ್ ಟನ್ ಡಿಎಪಿ, 73,969 ಮೆಟ್ರಿಕ್ ಟನ್ ಎನ್.ಪಿ.ಕೆ.ಕಾಂಪ್ಲೆಕ್ಸ್, 4,851 ಮೆಟ್ರಿಕ್ ಟನ್ ಎಂಒಪಿ ಹಾಗೂ 3,565 ಮೆ. ಟನ್ ಎಸ್‌ಒಪಿ ಸೇರಿ ಒಟ್ಟು 1,53,683 ಮೆಟ್ರಿಕ್ ಟನ್ ಮುಂಗಾರು ಹಂಗಾಮಿಗೆ ಬೇಡಿಕೆ ಇರುವುದಾಗಿ ಅವರು ತಿಳಿಸಿದ್ದಾರೆ.

**ಬಿತ್ತನೆ ಬೀಜಕ್ಕಿಲ್ಲ ಕೊರತೆ:** ಪ್ರಸಕ್ತ ಮುಂಗಾರು ಹಂಗಾಮಿಗೆ 16010 ಕ್ವಿಂಟಾಲ್ ಭತ್ತದ ಬಿತ್ತನೆ ಬೀಜಕ್ಕೆ ಬೇಡಿಕೆ ಇದ್ದು, 17260 ಕ್ವಿಂ. ಲಭ್ಯವಿರುವುದಾಗಿ ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಉಳಿದಂತೆ 25221 ಕ್ವಿಂ. ಮುಸುಕಿನ ಜೋಳ, 980 ಕ್ವಿಂ.ಏಕದಳ, 776 ಕ್ವಿಂ.ದ್ವಿದಳ ಧಾನ್ಯ, 6806 ಕ್ವಿಂ. ಶೇಂಗಾ, 16 ಕ್ವಿಂ. ಸೂರ್ಯಕಾಂತಿ, 60 ಕ್ವಿಂ. ಹತ್ತಿ ಸೇರಿದಂತೆ ಜಿಲ್ಲೆಗೆ 49869 ಕ್ವಿಂ. ಬಿತ್ತನೆ ಬೀಜಗಳ ಅಗತ್ಯವಿದ್ದು, ಅಗತ್ಯಕ್ಕಿಂತ ಹೆಚ್ಚು ಅಂದರೆ 53650 ಕ್ವಿಂ. ಪ್ರಸ್ತುತ ಲಭ್ಯವಿದೆ ಎಂದವರು ಮಾಹಿತಿ ನೀಡಿದ್ದಾರೆ.

# ಪರಿಸರ ಸಮತೋಲನಕ್ಕೆ ಜೇನು ಸಂತತಿ ರಕ್ಷಿಸಿ : ಟಿ.ಎನ್. ದೇವರಾಜ್




ದಾವಣಗೆರೆ, ಮೇ 21- ಪರಿಸರ ಸಮತೋಲನದಿಂದ ಇರಬೇಕಾದರೆ, ಜೇನು ಹುಳುಗಳ ಸಂತತಿ ಕಾಪಾಡಬೇಕಿದೆ ಎಂದು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಡಾ.ಟಿ.ಎನ್. ದೇವರಾಜ್ ಹೇಳಿದರು.

ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲ ಬ್ಯೂರೋ ಇವರ ಆಶ್ರಯದಲ್ಲಿ ನಡೆದ 'ವಿಶ್ವ ಜೇನು ದಿನಾಚರಣೆ' ಹಾಗೂ 'ಕೈತೋಟ ತರಬೇತಿ'ಯಲ್ಲಿ ಅವರು ಮಾತನಾಡಿದರು.

ಜೇನು ಹುಳುಗಳ ಕಾರ್ಯದಿಂದ ಸಸ್ಯ ಸಂಕುಲದ ವೈವಿಧ್ಯತೆ ಮತ್ತು ಉತ್ಪಾದನೆ ಅವಲಂಬನೆಯಾಗಿದೆ. ಪ್ರಕೃತಿದತ್ತವಾದ ಕೃಷಿಗೆ ಜೇನು ಸಹಾಯಕವಾಗಿದ್ದು, ಪರಾಗಸ್ಪರ್ಶ ಕ್ರಿಯೆ ನಡೆಯಲು ಜೇನು ಅನುಕೂಲ ಮಾಡಲಿದೆ ಎಂದರು.

ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ ಮಾತನಾಡಿ, ಜಗಳೂರು ತಾಲ್ಲೂಕಿನ ಮಹಿಳೆಯರು ಮತ್ತು ಮಕ್ಕಳಲ್ಲಿ ಅಪೌಷ್ಟಿಕತೆ ಹೆಚ್ಚಾಗಿದ್ದು, ಇದರ ನಿವಾರಣೆಗಾಗಿ ಸಾವಯವ ರೂಪದಲ್ಲಿ ಬೆಳೆದ ತರಕಾರಿಗಳನ್ನು ಆಹಾರದಲ್ಲಿ ಬಳಸಿದರೆ, ಉತ್ತಮ ಆರೋಗ್ಯ ಹೊಂದಬಹುದು ಎಂದು ಹೇಳಿದರು.

ಪ.ಪಂಗಡ ಉಪಯೋಜನೆಯಡಿ ಆಯ್ದ 40 ಕುಟುಂಬಗಳಿಗೆ ಪ್ರಸಕ್ತ ಸಾಲಿನಲ್ಲಿ ಪೌಷ್ಟಿಕ ಕೈತೋಟ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಧಾನ್ಯಗಳ ಸುರಕ್ಷತಾ ಕ್ರಮದ ಬಗ್ಗೆ ಸಸ್ಯ ಸಂರಕ್ಷಣಾ ವಿಜ್ಞಾನಿ ಡಾ.ಟಿ.ಜಿ. ಅವಿನಾಶ್ ವಿವರವಾದ ಮಾಹಿತಿ ನೀಡಿದರು.

ಕಲ್ಲೇದೇವರಪುರ ಗ್ರಾ.ಪಂ. ಅಧ್ಯಕ್ಷೆ ವಸಂತ ಕುಮಾರಿ, ಬಿದರಕೆರೆ ತರಳಬಾಳು ಅಮೃತ ರೈತ ಉತ್ಪಾದಕ ಕಂಪನಿಯ ನಿರ್ದೇಶಕ ಕೃಷ್ಣಮೂರ್ತಿ ಮಾಸ್ತರ್ ಮತ್ತು 50ಕ್ಕೂ ಅಧಿಕ ರೈತರು ಮತ್ತು ರೈತ ಮಹಿಳೆಯರು ತರಬೇತಿಯ ಕಾರ್ಯಾಗಾರದಲ್ಲಿದ್ದರು.


**ಬೇಕಾಗಿದ್ದಾರೆ**
ಬಿ.ಎಸ್ಸಿ., ಬಿ.ಇಡಿ. (ವಿಜ್ಞಾನ, ಗಣಿತ)
ಬಿ.ಎ., ಬಿ.ಇಡಿ. (ಕನ್ನಡ, ಇಂಗ್ಲೀಷ್, ಹಿಂದಿ, ಸಮಾಜ)
ಹಾಗೂ ಬಿಎಸ್ಸಿ., ಬಿ.ಎ. ತರಬೇತಿ ಪಡೆದ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ.
ನಂದಗೋಕುಲ ಆಂಗ್ಲಮಾಧ್ಯಮ ನರ್ಸರಿ, ಪ್ರಾಥಮಿಕ ಹಾಗೂ ಪ್ರೌಢಶಾಲೆ,
ದೇವರಾಜ ಅರಸು ಬಡಾವಣೆ, ಸಿ ಬ್ಲಾಕ್, 6ನೇ ಕ್ರಾಸ್, ಹೊಸ ಆರ್‌ಟಿಓ ಕಛೇರಿ ಹಿಂಭಾಗ, ಕೊಂಡಜ್ಜಿ ರಸ್ತೆ, ದಾವಣಗೆರೆ.
99640 17729

**ನೂತನವಾದ ವ್ಯಾಪಾರ ಮಳಿಗೆ ಬಾಡಿಗೆಗೆ ಇದೆ**
ಚಿತ್ರದುರ್ಗದ ಹೆಸರಾಂತ ಲಕ್ಷ್ಮಿ ಬಜಾರ್ (ಮಾರವಾಡಿ ಗಲ್ಲಿ)ನಲ್ಲಿ 15x45 ಅಳತೆಯ ಒಟ್ಟು 3 ಅಂತಸ್ತಿನ ಕಟ್ಟಡ ಬಾಡಿಗೆಗೆ ದೊರೆಯುತ್ತದೆ. (ಕಮರ್ಷಿಯಲ್ ಮಳಿಗೆ) ಬೆಳ್ಳಿ ಬಂಗಾರದ ಅಂಗಡಿಗೆ ಹಾಗೂ ಬಟ್ಟೆ ಅಂಗಡಿ ಮಳಿಗೆಗೆ ಉತ್ತಮವಾದ ಸ್ಥಳವಾಗಿದೆ. (ಶೌಚಾಲಯದ ವ್ಯವಸ್ಥೆ ಇದೆ)
97414 23656
99806 60306

**ಬಂಗಲೆ ಸೈಟುಗಳು ಮಾರಾಟಕ್ಕಿವೆ**
ಎಂ.ಸಿ.ಸಿ. 'ಎ' ಬ್ಲಾಕ್ ದಕ್ಷಿಣ 45x150 ಅಕ್ಕ-ಪಕ್ಕ (ಲಕ್ಷ್ಮಿ ಫ್ಲೋರ್ ಮಿಲ್ ಸರ್ಕಲ್ ಹತ್ತಿರ) ಸಿದ್ದವೀರಪ್ಪ ಬಡಾವಣೆ ಉತ್ತರ 90x95, ಶಿವ-ಪಾರ್ವತಿ ಬಡಾವಣೆ ದಕ್ಷಿಣ 13000 ಅಡಿ.
ಐಗೂರು ವಿಜಯಕುಮಾರ್
99457 02495

**ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ**
**SSLC ನೇರ ಪರೀಕ್ಷೆ**
IInd PUC/Senior Secondary, Arts/Commerce/Science
B.Sc.-Agriculture, B.Tech All branches, D.Pharma, B.Ed., PhD regular
B.A., B.com., B.Sc., M.A., M.Com., MBA, MLIB, Correspondence.
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿರಿ.
SS Global Institute for Higher Education
1982-1ನೇ ಮಹಡಿ, ಅನ್ವಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266
ವಿ. ಸೂ: ಫೀಸನ್ನು ಕಂತಿನಲ್ಲಿ ಪಾವತಿಸಬಹುದು

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 40x60 North, 40x50 South, 30x50 East-South Corner, 25x40 West.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕರ್ನಾಟಕ ಮುಕ್ತ ವಿದ್ಯಾಲಯ (KOS)**
ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದಿದೆ
ಶಿಕ್ಷಣ ವಂಚಿತರಾದವರಿಗೆ ನೇರ ಪರೀಕ್ಷೆ
SSLC/PUC/ಪದವಿ/ಸ್ನಾತಕೋತ್ತರ ಪದವಿ & ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 87620 58369, 82173 02649

**ಸೈಟ್ ಮಾರಾಟಕ್ಕೆ (KHB)**
40x60 ದಕ್ಷಿಣ
40 ಅಡಿ ರಸ್ತೆಗೆ
(ಲೋಕೇಶನ್ ತುಂಬಾ ಚೆನ್ನಾಗಿದೆ)
ಮಾಲೀಕರು : 96633-35235

**ವೀರಶೈವ ಖಾನಾವಳಿ**
ಕ್ಲೀನಿಂಗ್ ಅಂಡ್ ಸಪ್ಲೈಯರ್ ಕೆಲಸಕ್ಕೆ ಬೇಕಾಗಿದ್ದಾರೆ
99017 70830
99458 29046

**ಸೈಟುಗಳು ಮಾರಾಟಕ್ಕಿವೆ**
ಎಸ್.ಎಸ್. 'ಬಿ' ಬ್ಲಾಕ್ ಪಶ್ಚಿಮ ಕಾರ್ನರ್ ಸೈಟು ಮತ್ತು ಡಬಲ್ ರೋಡ್ 30x56 (DC ಮನೆ ಸರ್ಕಲ್) ವಾಜಪೇಯಿ ಬಡಾವಣೆ ಪಶ್ಚಿಮ 30x50, ಹೊಸ ಕುಂದುವಾಡ ಉತ್ತರ 30x50 (ಅಕ್ಕ-ಪಕ್ಕ)
ಐಗೂರು ವಿಜಯಕುಮಾರ್
99457 02495

**WANTED**
Required Male Office Assistant
ANDANUR CHITS (R)
Ram & Co. Circle, Davanagere.

**ಕಮರ್ಷಿಯಲ್ ಖಾಲಿ ಜಾಗ ಬಾಡಿಗೆಗೆ ದೊರೆಯುತ್ತದೆ**
ಶಾಮನೂರು ಹತ್ತಿರ Top In Town Hotel ಹತ್ತಿರ 160x180 ಖಾಲಿ ಜಾಗ ಉತ್ತರಕ್ಕೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ದಾವಣಗೆರೆಯ ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್‌ನಲ್ಲಿ ಬಾರ್ & ರೆಸ್ಟೋರೆಂಟ್‌ನಲ್ಲಿ ಕ್ಯಾಪ್ಟನ್, ಸ್ಟೀವರ್ಡ್ (ಸಪ್ಲೈಯರ್) ಬೇಕಾಗಿದ್ದಾರೆ. ಅನುಭವ ಇದ್ದವರಿಗೆ ಆಕರ್ಷಕ ವೇತನ ಕೊಡಲಾಗುವುದು. ಸಂಪರ್ಕಿಸಿ :
8884630532, 9606745754

**ಸುವರ್ಣ ಉದ್ಯೋಗಾವಕಾಶ**
SBI LIFE ನಲ್ಲಿ ಸುವರ್ಣ ಉದ್ಯೋಗಾವಕಾಶವಿದ್ದು, ಪದವಿಯನ್ನು ಹೊಂದಿದ ಸುಮಾರು 30 ರಿಂದ 65 ವಯಸ್ಸಿನ 50 ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳಿಗೆ ಅವಕಾಶವಿದೆ. ಸಂದರ್ಶನ :
ದಿನಾಂಕ : 22.5.2024ರ ಬೆಳಿಗ್ಗೆ 10.30ಕ್ಕೆ
87626 24248

**ಪ್ರವೇಶ ಪ್ರಕಟಣೆ**
ಡಿಪ್ಲೊಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ತಕ್ಷಣ ಬೇಕಾಗಿದ್ದಾರೆ**
ಪಿಗ್ಮಿ ಏಜೆಂಟ್ ಹಾಗೂ ಸಹಾಯಕ ಸಿಬ್ಬಂದಿ ಬೇಕಾಗಿದ್ದಾರೆ
ಶ್ರೀ ಸುಪಾರ್ಶ್ವನಾಥ ಜೈನ್ ಮೈನಾರಿಟಿ ಸೌಹಾರ್ದ ಸಹಕಾರಿ ನಿಯಮಿತ,
ವಸಂತ ರಸ್ತೆ, ದಾವಣಗೆರೆ.
97431 79561

**ಕೆಲಸಕ್ಕೆ ಬೇಕಾಗಿದ್ದಾರೆ**
ಪತ್ರಿಕೆ ಆಫೀಸ್‌ನಲ್ಲಿ ಕೆಲಸ ಮಾಡಲು 25 ರಿಂದ 35 ವರ್ಷದೊಳಗಿನ ಪುರುಷ ಅಭ್ಯರ್ಥಿ ಸಂಜೆ 6 ರಿಂದ ರಾತ್ರಿ 12ರವರೆಗೆ ಬೇಕಾಗಿದ್ದಾರೆ.
08192 254736

**ಸೈಟುಗಳು ಮಾರಾಟಕ್ಕಿವೆ**
30x40 North 100 ಅಡಿ ರೋಡಿಗೆ ಹತ್ತಿರ, ಸಿರಿಮನೆ ಡಾಬಾ ಹತ್ತಿರ ಜರೇಕಟ್ಟಿ ರೋಡಿಗೆ ಹತ್ತಿರ 30x42 North, ಅಥಣಿ ಕಾಲೇಜ್ ಹತ್ತಿರ North, ಅಥಣಿ ಕಲೇಜ್ ಹತ್ತಿರ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟ್ ಮಾರಾಟಕ್ಕಿದೆ**
ಶಾಮನೂರಿನಲ್ಲಿ 8500 ಚದುರ ಮೀಟರ್ ಖಾಲಿ ನಿವೇಶನ ಬಾಡಿಗೆಗೆ ಕೊಡಲಾಗುತ್ತದೆ.
ಆಸಕ್ತರು ಸಂಪರ್ಕಿಸಿ :
92417 84884

**HOUSE FOR RENT**
2nd floor 40x30
Semi furnished
Swami vivekanand badavane behind mahesh PU College 7th 'B' main #4103.
Contact
89044 34445

**WANTED**
ACCOUNTANT
with3 years experience in Tally must Attractive Salary
PRUTHVI ENTERPRISES
Cow market opposite , E block APMC Davanger.
90660 50520, 96636 78744

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಮಳಿಗೆ ಬಾಡಿಗೆಗೆ ಇದೆ**
ಚರ್ಚ್ ಮುಖ್ಯರಸ್ತೆ, ಗಾಯತ್ರಿ ಉಪಹಾರ ದರ್ಶಿನಿ ಪಕ್ಕ, ಎಂಸಿಸಿ ಎ ಬ್ಲಾಕ್.
96201 62541

**ಮಾರ್ಕ್ಸ್ ಕಾರ್ಡ್ ಕಳೆದಿದೆ**
ವಿದ್ಯಾಸಾಗರ ಎನ್.ಡಿ. ಹೆಸರಿನಲ್ಲಿರುವ ಎಸ್‌ಎಸ್‌ಎಲ್‌ಸಿ, ಪಿಯುಸಿ, ಬಿಸಿಎ ತರಗತಿಗಳ ಓರಿಜಿನಲ್ ಮಾರ್ಕ್ಸ್‌ಕಾರ್ಡ್‌ಗಳು ಮನೆಯನ್ನು ವರ್ಗಾವಣೆ ಮಾಡುವ ಸಮಯದಲ್ಲಿ ಕಳೆದಿರುತ್ತವೆ. ಸಿಕ್ಕವರು ಈ ಕೆಳಗಿನ ಫೋನ್‌ಗೆ ತಿಳಿಸಲು ಕೋರಿದೆ.
86609 75038

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಮಯ : ಬೆ. 9.00 ರಿಂದ ರಾತ್ರಿ : 8.00.
ಭಾನುವಾರ ಹಾಫ್ ಡೇ ಕಡ್ಡಾಯ
94481 54682

**ಕೇರ್ ಟೇಕರ್ ಬೇಕಾಗಿದ್ದಾರೆ**
ವಯಸ್ಸಾದ ವ್ಯಕ್ತಿಯನ್ನು ನೋಡಿಕೊಳ್ಳಲು ಅನುಭವಿ ಕೇರ್ ಟೇಕರ್ ಬೇಕಾಗಿದ್ದಾರೆ. ಉತ್ತಮ ಸಂಬಳ ಇದೆ. ಸೇವಾ ಮನೋಭಾವ, ತಾಳ್ಮೆ ಇರುವವರಿಗೆ ಆದ್ಯತೆ, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :
ಚನ್ನಗಿರಿ ವಿರೂಪಾಕ್ಷಪ್ಪ ಕಲ್ಯಾಣ ಮಂಟಪ
ಗಡಿಯಾರ ಕಂಬದ ಎದುರು, ದಾವಣಗೆರೆ.
94481 10895

**ಬೇಕಾಗಿದ್ದಾರೆ**
ಜಗಳೂರು ತಾಲ್ಲೂಕು ಬಿಳಿಚೋಡು ಹತ್ತಿರದ ನರೇನಹಳ್ಳಿಯಲ್ಲಿ ಸಿಮೆಂಟ್ ಇಟ್ಟಿಗೆ ಮಾಡುವ ಬ್ಯಾಚ್ ಬೇಕಾಗಿದ್ದಾರೆ. ಉಚಿತ ವಸತಿ ನೀಡಲಾಗುವುದು. ಸಂಪರ್ಕಿಸಿ :
+91 94480 07592

**Change of Name**
I, Shri Bhavesh K. Jain S/o Kishor Kumar Jain age 29 R/o # 7/6 B Shri Hari Nilaya M.K. Building backside Basavaraj Pet, Davangere Tq & Dist. -577 001. Karnataka State. That i am to state there names Ashish K. Jain s/o Kishor Kumar Jain, Bhavesh K. Jain s/o Kishor Kumar jain were referred to me only and to non-else-This affidavit is required to submit before the concerned authorities. vide affidavit dated 14.5.2024 sworn before notary Public I.P. Brahama kumar, Davangere. Henceforth all transaction and dealings will be in the name Bhavesh K. jain s/o Kishor Kumar Jain.

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ಕೆಲಸದ ಸಮಯ :
ಬೆಳಗ್ಗೆ 10 ರಿಂದ 6 ರವರೆಗೆ
ಕೆಲಸ : ಟೆಲಿಕಾಲಿಂಗ್, ಅರ್ಹತೆ: SSLC, PUC Any Degree, ವಯಸ್ಸು: 18 to 35, ಸಂಬಳ : 7,000 to 17,000, ದಾವಣಗೆರೆ.
90351 75744

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಶಾಲೆಗೆ ಆಯಾ ಕೆಲಸಕ್ಕೆ ಬೇಕಾಗಿದ್ದಾರೆ. ಹೊಸಬರು ಈ ಕೂಡಲೇ ಸಂಪರ್ಕಿಸಿ. ಎಮ್‌ಇಎಸ್ ಕಾನ್ವೆಂಟ್, ಆಂಜನೇಯ ಬಡಾವಣೆ, ದಾವಣಗೆರೆ -4
98804 36414

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಬೇಕಾಗಿದ್ದಾರೆ**
ದಾವಣಗೆರೆಯ ಹೋಟೆಲ್ ಪೂಜಾ ಇಂಟರ್ ನ್ಯಾಷನಲ್‌ನ ಬಾರ್ & ರೆಸ್ಟೋರೆಂಟ್‌ನಲ್ಲಿ ಕ್ಯಾಪ್ಟನ್, ಸ್ಟೀವರ್ಡ್ (ಸಪ್ಲೈಯರ್) ಬೇಕಾಗಿದ್ದಾರೆ. ಅನುಭವ ಇದ್ದವರಿಗೆ ಆಕರ್ಷಕ ವೇತನ ಕೊಡಲಾಗುವುದು. ಸಂಪರ್ಕಿಸಿ :
88846 30532, 96067 45754

**SPBVS Akshar EHPS**
TC Layout Dvg.
WANTED TEACHERS
KG Classes - Any Degree
1st to 8th Std, BA / B.Ed, B.Sc / B.Ed./ D.Ed contact :
97311 00216, 98442 56380

**ಬೇಕಾಗಿದ್ದಾರೆ**
ನಮ್ಮ ಮಾರಾಟ ಮಳಿಗೆಯಲ್ಲಿ ಕೌಂಟರ್ ಸೇಲ್ಸ್ ಮತ್ತು ಡಿಲೆವರಿ ವಿಭಾಗದಲ್ಲಿ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ.
Timing 9 AM to 9 PM
ANS FOODS
ಮಂಡಿಪೇಟೆ, ದಾವಣಗೆರೆ.
9448272734

**WANTED**
Receptionist and Room Boy
98861 58644
Davangere.

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ವಧು ಬೇಕಾಗಿದೆ**
44 ವರ್ಷ, ಫೈನಾನ್ಸ್ ಮತ್ತು ಕಿರಾಣಿ ಮರ್ಚೆಂಟ್ ಮಾಡುತ್ತಿರುವ ವರನಿಗೆ ವಧು ಬೇಕಾಗಿದೆ.
89047 54519
86184 74909

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
ಸಂಪರ್ಕಿಸಿ. :
88920 08800

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ವಾರದ ಚೀಟಿ ಪ್ರಾರಂಭ**
ರೂ. 2 ಲಕ್ಷದ ಚೀಟಿ 50 ಸದಸ್ಯರು ವಾರದ ಕಂತು 2800/- ರಿಂದ 4000/- ಸಂಪರ್ಕಿಸಿ :
78997 75159
ಸ್ಕಂದ ಚಿಟ್ ಫಂಡ್ಸ್ (ರಿ)

**ಸೈಟ್ ಬಾಡಿಗೆಗಿದೆ**
ದಾವಣಗೆರೆಯ ಎಸ್‌ಪಿ ಆಫೀಸ್ ಎದುರು, 20x30 ದಕ್ಷಿಣ ದಿಕ್ಕಿನ ಸೈಟ್ 13 ಲಕ್ಷಕ್ಕೆ, ಯರಗುಂಟೆ ಗ್ರಾ.ಪಂ. ಡೋರ್ ನಂಬರ್, ಇ-ಸೊತ್ತು, ಖಾತೆ, ಇಸಿ ಎಲ್ಲಾ ದಾಖಲಾತಿಗಳು ಲಭ್ಯ, ಸೈಟ್ ರಿಜಿಸ್ಟ್ರೇಷನ್‌ಗೆ ರೆಡಿ ಇದೆ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
76768 55957

**REQUIRED**
Experienced, having Tally and GST knowledge, Accountants are required to work in Reputed Firms [ 5 persons] And office boy are also required.
99000 22030
# 82/19,P B Road, Beside Wellness Stores, Opp: Renuka Manidar, Davangere.

**TEACHERS WANTED**
Any Degree - 3 Posts
PUC - 3 Posts. Contact :
Vidya Vikas Convent
Behind Aaraike Hospital Dvg. Contact :
74831 70369

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಡಾಲರ್ಸ್‌ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಸಂಬಳ 6000/8000
ಆಸಕ್ತಿ ಇರುವವರು ಸಂಪರ್ಕಿಸಿ :
63601 52755

**ಬೇಕಾಗಿದ್ದಾರೆ**
ಟಾಟಾ ಏಸ್ ಓಡಿಸಬಲ್ಲ ಬ್ಯಾಡ್ಜ್‌ವುಳ್ಳ ಡ್ರೈವರ್, ಎಸ್ ಎಸ್.ಎಲ್ ಸಿ ಪಾಸ್/ಫೇಲಾಗಿರುವವರು ಸೇಲ್ಸ್ ಮನ್ ಹಾಗೂ ಡಿಲೆವರಿ ಬಾಯ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. ಅನುಭವವುಳ್ಳವರು ಸಂಪರ್ಕಿಸಿ :
ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
9448233326, 7899135660


## ತೃತೀಯ ವರ್ಷದ ಪುಣ್ಯಸ್ಮರಣೆ




**ಶ್ರೀಮತಿ ಗೀತಾ ಕೋರಿ ಶೆಟ್ಟರ್**
ನಿಧನ : 22.05.2021

*ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು.*
*ನಿಮ್ಮ ಸವಿ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ...*

ಇಂತಿ ದುಃಖತಪ್ತರು: ಪತಿ : ವಿಶ್ವನಾಥ ಬಿ. ಕೋರಿ ಶೆಟ್ಟರ್
ಮಗಳು : ವಿಭಾ ವಿ. ಕೋರಿ ಶೆಟ್ಟರ್
ಮಗ : ವಿಶಾನ್ ವಿ. ಕೋರಿ ಶೆಟ್ಟರ್
ಮಾವ : ಬಸವರಾಜ್ ಬಿ. ಕೋರಿ ಶೆಟ್ಟರ್ ಮತ್ತು
ಕೋರಿ ಶೆಟ್ಟರ್ ಫ್ಯಾಮಿಲಿ

## ಭಾವಪೂರ್ಣ ಶ್ರದ್ಧಾಂಜಲಿ



ದಾವಣಗೆರೆ ನಗರ ಹೊಂಡದ ರಸ್ತೆ ಬಾಳೆಹೊಲದ ಸಿದ್ದಲಿಂಗಪ್ಪ ಕ್ರಾಸ್ ವಾಸಿಯಾದ
**ದಿ|| ಶ್ರೀ ತೆಲಿಗಿ ಜಯ್ಯಣ್ಣನವರು**
ಮರಣ : 21.05.2024

ದಿನಾಂಕ : 21.05.2024ನೇ ಮಂಗಳವಾರ ಬೆಳಿಗ್ಗೆ 4.30 ಗಂಟೆಗೆ ದೈವಾಧೀನರಾದ ಶ್ರೀ ಟಿ.ಆರ್. ಜಯ್ಯಣ್ಣನವರಿಗೆ ಭಾವಪೂರ್ಣ ಶ್ರದ್ಧಾಂಜಲಿ....

ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

**ತೆಲಿಗಿ ವಂಶಸ್ಥರು, ಬಾಳೆಹೊಲದ ವಂಶಸ್ಥರು**
**ಕರೇಶಿವಪ್ಪರ ವಂಶಸ್ಥರು ದಾವಣಗೆರೆ.**

# ಕಬ್ಬು ಬೆಳೆ ನಾಶದ ಪರಿಹಾರಕ್ಕೆ ಒತ್ತಾಯ



ದಾವಣಗೆರೆ, ಮೇ 21- ಬಿಸಿಲಿನ ಪ್ರಖರತೆಗೆ ಒಣಗಿ ನಾಶವಾದ ಕಬ್ಬಿನ ಬೆಳೆಗೆ ಪರಿಹಾರ ಒದಗಿಸುವಂತೆ ಒತ್ತಾಯಿಸಿ ದಾವಣಗೆರೆ ಸಕ್ಕರೆ ಕಂಪನಿ ನಿಯಮಿತ, ಜಿಲ್ಲಾ ರೈತರ ಒಕ್ಕೂಟ ಮತ್ತು ಕಬ್ಬು ಬೆಳೆಗಾರರ ಸಂಘದಿಂದ ಜಂಟಿಯಾಗಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ಮುಖಂಡರು, ಅವೈಜ್ಞಾನಿಕ ಭದ್ರಾ ವೇಳಾ ಪಟ್ಟಿಯಿಂದ ಈ ಭಾಗದ ರೈತರಿಗೆ ನೀರು ಸಿಗಲಿಲ್ಲ ಮತ್ತು ಅಂತರ್ಜಲದ ಮಟ್ಟ ಕ್ಷೀಣಿಸಿದ ಪರಿಣಾಮ ಬಿಸಿಲಿನ ಝಳ ಹಾಗೂ ಉಷ್ಣದ ಹವೆಗೆ ರೈತನ ಬೆಳೆ ನಾಶವಾಗಿದೆ ಎಂದು ಹೇಳಿದರು.

ರೈತರು ಸಾಲ ಮಾಡಿ ಬೆಳೆದ ಕಬ್ಬು ಸಂಪೂರ್ಣವಾಗಿ ಒಣಗಿದ್ದರಿಂದ ರೈತನ ಬದುಕು ಸಂಕಷ್ಟಕ್ಕೀಡಾಗಿದೆ. ಆದ್ದರಿಂದ ರೈತನ ಬದುಕಿಗೆ ನ್ಯಾಯ ಒದಗಿಸುವಂತೆ ಮನವಿ ಮಾಡಿದರು.

ಸುಮಾರು 45 ಸಾವಿರ ರೂ.ಗಳು ಖರ್ಚಾಗುವ 1 ಎಕರೆ ಕಬ್ಬು ಬೆಳೆಗೆ, ರೈತ ಸಾಲ ಮಾಡಿ ಇಕ್ಕಟ್ಟಿನಲ್ಲಿ ಸಿಲುಕಿದ್ದಾನೆ ಎಂದ ಅವರು, ಒಟ್ಟು 1069 ರೈತರ, ಸುಮಾರು 2070 ಎಕರೆ ಕಬ್ಬಿನ ಬೆಳೆ ನಾಶವಾಗಿದೆ ಎಂದು ದಾವಣಗೆರೆ ಸಕ್ಕರೆ ಕಂಪನಿ ನಿಯಮಿತದವರು ಅಂದಾಜಿಸಿದ್ದಾರೆ ಎಂದು ಮಾಹಿತಿ ನೀಡಿದರು.

ದಾವಣಗೆರೆ ಸಕ್ಕರೆ ಕಂಪನಿ ಕಾರ್ಯನಿರ್ವಾಹಕ ನಿರ್ದೇಶಕ ಅಭಿಜಿತ್ ಶಾಮನೂರು, ಜಿಲ್ಲಾ ರೈತರ ಒಕ್ಕೂಟದ ಮುಖಂಡ ಕೋಲೇನಹಳ್ಳಿ ಬಿ.ಎಂ. ಸತೀಶ್, ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ತೇಜಸ್ವಿ ಪಟೇಲ್, ರೈತ ಮುಖಂಡರಾದ ಹದಡಿ ಜಿ.ಸಿ. ನಿಂಗಪ್ಪ, ಚಂದ್ರಶೇಖರ ಪೂಜಾರ, ಕುಕ್ಕುವಾಡದ ಡಿ.ಬಿ. ಶಂಕರ್, ಡಿ.ಬಿ. ಅರವಿಂದ, ಕೆ.ಸಿ. ಉಮೇಶ್, ಯು.ಸಿ. ನಾಗರಾಜ್, ದೂಳೆಹೊಳೆ ವಾಗೀಶ್ ಇತರರಿದ್ದರು.

## ಕಂಪನಿ ವ್ಯವಸ್ಥಾಪಕರ ವಿರುದ್ಧ ಸಿಂಧಿಯಾ ದೂರು

ಗ್ವಾಲಿಯರ್, ಮೇ 21 – ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರ ಪುತ್ರ, ತಮ್ಮದೇ ಕಂಪನಿಯ ವ್ಯವಸ್ಥಾಪಕರ ವಿರುದ್ಧ ಹಣ ಕಬಳಿಕೆಯ ದೂರು ದಾಖಲಿಸಿದ್ದಾರೆ. ಮೈಮಂಡಿ ಎಂಬ ದಿನಸಿ ಆಪ್ ಒಂದರ ಮಾಲೀಕರಾಗಿರುವ ಮಹಾನಾರ್ಯಮನ್ ಸಿಂಧಿಯಾ ಅವರು ಮಧ್ಯ ಪ್ರದೇಶ ಪೊಲೀಸರಲ್ಲಿ ದೂರು ದಾಖಲಿಸಿದ್ದಾರೆ. ಕಂಪನಿಯ ಖರೀದಿ ವ್ಯವಸ್ಥಾಪಕ ಶಿವಮ್ ಗುಪ್ತ ವಿರುದ್ಧ ದೂರು ದಾಖಲಿಸಲಾಗಿದೆ.

# ಅಭಿವೃದ್ಧಿಯ ಕನಸು ಕಂಡಿದ್ದ ರಾಜೀವ್ ಗಾಂಧಿ ಅಲ್ಪ ಸಮಯದಲ್ಲೇ ಧ್ರುವತಾರೆಯಂತಾಗಿದ್ದರು



ರಾಜೀವ್ ಗಾಂಧಿ 33ನೇ ಪುಣ್ಯತಿಥಿ - ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ದಿನ ಕಾರ್ಯಕ್ರಮದಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್

ದಾವಣಗೆರೆ, ಮೇ 21 - ಸಾಮಾನ್ಯನ ಕೈಯಲ್ಲಿ ಮೊಬೈಲ್ ಫೋನ್ ಬರಲು ಮಾಜಿ ಪ್ರಧಾನ ಮಂತ್ರಿ ದಿ. ರಾಜೀವ್ ಗಾಂಧಿ ಕಾರಣರಾಗಿದ್ದಾರೆಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ಹೇಳಿದರು.

ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿಯ ಇಂಟಕ್ ವಿಭಾಗವು ಏರ್ಪಡಿಸಿದ್ದ ಮಾಜಿ ಪ್ರಧಾನ ಮಂತ್ರಿ ಭಾರತ ರತ್ನ ರಾಜೀವ್ ಗಾಂಧಿ ಅವರ 33ನೇ ಪುಣ್ಯತಿಥಿಯನ್ನು ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ದಿನವನ್ನಾಗಿ ಆಚರಿಸಲ್ಪಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ರಾಜೀವ್ ಗಾಂಧಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಗೌರವ ಅರ್ಪಿಸಿ ಅವರು ಮಾತನಾಡಿದರು.

ರಾಜೀವ್ ಗಾಂಧಿ ಅವರು ಅತಿ ಕಿರಿಯ ವಯಸ್ಸಿಗೆ ವಿಶ್ವದಲ್ಲೇ ದೊಡ್ಡ ಪ್ರಜಾಪ್ರಭುತ್ವ ಹೊಂದಿರುವ ಭಾರತ ದೇಶದ ಪ್ರಧಾನ ಮಂತ್ರಿಯಾಗಿ ಅಧಿಕಾರದ ಚುಕ್ಕಾಣಿ ಹಿಡಿದು ಐದು ವರುಷಗಳ ಕಾಲ ದೇಶಕ್ಕೆ ಉತ್ತಮ ಆಡಳಿತ ನೀಡಿದ್ದರು. ತಮ್ಮ ಅಧಿಕಾರದ ಅವಧಿಯಲ್ಲಿ ಅವರು ಭಾರತ ದೇಶವನ್ನು ಜಗತ್ತಿನ ಶಕ್ತಿಶಾಲಿ ರಾಷ್ಟ್ರವನ್ನಾಗಿ ಮಾಡಿದ್ದರು ಎಂದವರು ಹೇಳಿದರು.

ಭಾರತ ದೇಶಕ್ಕೆ ಹೊಸ ಶಿಕ್ಷಣ ನೀತಿ ಜಾರಿಗೊಳಿಸಿದ್ದರು. ಇಡೀ ಪ್ರಪಂಚ ಭಾರತ ದೇಶದ ಕಡೆ ತಿರುಗಿ ನೋಡುವಂತೆ ಮಾಡಿದ್ದರು. ಭಾರತ ದೇಶ ಕಂಡ ಅಪ್ರತಿಮ ನಾಯಕ ರಾಜೀವ್ ಗಾಂಧಿ ಅವರು ಅಲ್ಪ ಸಮಯದಲ್ಲಿ ದೇಶದ ಅಭಿವೃದ್ಧಿಯ ಮೂಲಕ ಧ್ರುವತಾರೆಯಾಗಿ ಮಿಂಚಿದ್ದರು ಎಂದು ಬಸವರಾಜ್ ಬಣ್ಣಿಸಿದರು.

18 ವರ್ಷದ ಯುವ ಸಮೂಹಕ್ಕೆ ಮತದಾನದ ಹಕ್ಕನ್ನು ನೀಡಿದ್ದರು. ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿಯ ಕನಸು ಕಟ್ಟಿಕೊಂಡಿದ್ದ ರಾಜೀವ್ ಗಾಂಧಿ ಅವರು ಅದನ್ನು ಪ್ರಾಮಾಣಿಕವಾಗಿ ಜಾರಿಗೊಳಿಸಿದ್ದರು. ಉನ್ನತ ಶಿಕ್ಷಣಕ್ಕೆ ಮಹತ್ವ ನೀಡಿ ಅನೇಕ ವಿಶ್ವ ವಿದ್ಯಾಲಯಗಳನ್ನು ಸ್ಥಾಪಿಸಿದ್ದರು. ಟೆಲಿಕಾಂನಲ್ಲಿ ಕ್ರಾಂತಿ ಮಾಡಿ, ಕಂಪ್ಯೂಟರೀಕರಣಕ್ಕೆ ಒತ್ತು ನೀಡಿದ್ದರು.

ಸಂವಿಧಾನದ 73 ಮತ್ತು 74ನೇ ವಿಧಿಗೆ ತಿದ್ದುಪಡಿ ತಂದು ಪಂಚಾಯತ್ ರಾಜ್ ವ್ಯವಸ್ಥೆ ಸರಿಪಡಿಸಿದ್ದರು. ರಾಜೀವ್ ಗಾಂಧಿ ನೇತೃತ್ವದಲ್ಲಿ 1984 ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ 411 ಲೋಕಸಭಾ ಸ್ಥಾನಗಳನ್ನು ಗೆಲ್ಲುವ ಮೂಲಕ ಇತಿಹಾಸವನ್ನು ನಿರ್ಮಿಸಿದ್ದರು ಎಂದು ಅವರು ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಸಮಿತಿಯ ಇಂಟಕ್ ವಿಭಾಗದ ಅಧ್ಯಕ್ಷ ಕೆ.ಎಂ. ಮಂಜುನಾಥ್, ಜಿಲ್ಲಾ ಕಾಂಗ್ರೆಸ್ ಮುಖಂಡರುಗಳಾದ, ಬಿ. ಹೆಚ್. ಉದಯಕುಮಾರ್, ಸಿಂಗ್ರಿಹಳ್ಳಿ ವಿ. ನೀಲಕಂಠಪ್ಪ, ಶಿವಾನಂದ್, ಗಿರಿಧರ್ ಸತಾಲ್, ಡಿ. ಶಿವಕುಮಾರ್, ಎ. ರಾಜಶೇಖರ್, ನಿಟ್ಟುವಳ್ಳಿ ಡಿ. ಬಸವರಾಜ್, ಮುಬಾರಕ್, ಸುರೇಶ್, ಕುಮಾರ್ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

## ಇಂದು ಟೀ ದಿನ :

### ಟೀ ಬೇಕೇ ಟೀ



ಛಾಯ್... ಛಾಯ್ ... ಛಾಯ್
ಎಲ್ಲರ ಬಾಯಲು ಹಾಯ್ ಹಾಯ್
ಚಹಾ ಎನ್ನುತಲದು ಬಹು ಜನಪ್ರಿಯ
ಜನ ಸಾಮಾನ್ಯರಿಗೆ ಟೀ ಬಹು ಪ್ರಿಯ

ಕುದಿಯುವ ನೀರಿಗೆ ಟೀ ಸೊಪ್ಪು
ಸೇರಿಸಿರಿ ಸಿಹಿಗೆ ಸಕ್ಕರೆ ಅದಕಷ್ಟು
ಬೆರೆಸಿರಿ ಬಣ್ಣಕೆ ಅದಕೆ ಹಾಲನ್ನು
ಆಯಾಸದ ತನುವಿಗೆ ಅದು ಚೆನ್ನು..

ಹಲವರ ಪಾಲಿಗೆ ಬದುಕಿನ ತುತ್ತು
ಟೀ ಮಾರುತ ಅವರಿಗೆ ಬಾಳಲು ಗೊತ್ತು
ಬಾಳಿನ ಬಂಡಿಯನ್ನವರು ಎಳೆಯಲು
ಕಾಯಕ ನಿಷ್ಠೆಯು ಅವರಲ್ಲಿ ಇರಲು !

ದಣಿದ ದೇಹವು ಬಯಸುವ ಹಿತಕಾರಿ
ಕುಡಿಯಲು ಅವರಿಗದುವೇ ಚೇತೋಹಾರಿ !
ಭೇದ ಭಾವವಿರದೆ ಎಲ್ಲರು ಹೀರುವರು
ಟೀ ಪಾರ್ಟಿಯನು ಖುಷಿಯಲಿ ನಡೆಸುವರು !

- ಶ್ರೀಮತಿ ವೀಣಾ ಕೃಷ್ಣಮೂರ್ತಿ,
ದಾವಣಗೆರೆ.

# ನಾಳಿನ ತಂತ್ರಜ್ಞಾನಕ್ಕೆ ಇಂದೇ ಸಿದ್ಧವಾದರೆ ಮಾತ್ರ ಉಳಿವು

ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜುಕೇಶನ್ ಕಾರ್ಯಕ್ರಮದಲ್ಲಿ ಯುಬಿಡಿಟಿ ತಾಂತ್ರಿಕ ಮಹಾವಿದ್ಯಾಲಯದ ಕಂಪ್ಯೂಟರ್ ವಿಭಾಗದ ಮುಖ್ಯಸ್ಥ ಡಾ. ಕೆ.ಎಸ್. ಶ್ರೀಧರ್ ಅಭಿಮತ




ದಾವಣಗೆರೆ ಮೇ 21 - ದಶಕಗಳ ಕೆಳಗೆ ಕಂಪ್ಯೂಟರ್ ಬಂದಾಗ ಉದ್ಯೋಗಗಳೇ ನಿರ್ಮೂಲನೆಯಾಗುತ್ತವೆ ಎಲ್ಲರೂ ಹೆದರಿದರು, ಆದರೆ ಕಂಪ್ಯೂಟರ್ ಕ್ಷೇತ್ರವೇ ದೊಡ್ಡ ಉದ್ದಿಮೆಯಾಗಿ ಕೋಟ್ಯಂತರ ಜನರಿಗೆ ಉದ್ಯೋಗ ನೀಡಿದೆ, ಮುಂದೆ ಕೃತಕ ಬುದ್ಧಿಮತ್ತೆಯೂ ಹೀಗೇ, ಆದ್ದರಿಂದ ನಾಳಿನ ತಂತ್ರಜ್ಞಾನಕ್ಕೆ ನಾವಿಂದೇ ಸಿದ್ಧರಾಗಬೇಕು ಎಂದು ಯುಬಿಡಿಟಿ ತಾಂತ್ರಿಕ ಮಹಾವಿದ್ಯಾಲಯದ ಕಂಪ್ಯೂಟರ್ ವಿಭಾಗದ ಮುಖ್ಯಸ್ಥ ಡಾ. ಶ್ರೀಧರ್ ಕೆ.ಎಸ್. ಅಭಿಪ್ರಾಯ ಪಟ್ಟರು.

ನಗರದ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜುಕೇಶನ್‌ನಲ್ಲಿ ನಿನ್ನೆ ಏರ್ಪಾಡಾಗಿದ್ದ 'ಕೃತಕ ಬುದ್ಧಿಮತ್ತೆಯ ಭವಿಷ್ಯ' ಕುರಿತಾದ ರಾಜ್ಯಮಟ್ಟದ ವಿಚಾರ ಸಂಕಿರಣ 'ಪ್ರಜ್ಞಾ'ದ ಸಮರೋಪ ಸಮಾರಂಭದಲ್ಲಿ ಪಾಲ್ಗೊಂಡು ಅವರು ಸಮಾರೋಪ ಭಾಷಣ ಮಾಡಿದರು.

ಕೃತಕ ಮೆದುಳನ್ನು ನಿರ್ಮಾಣ ಮಾಡುವ 1980ರ ಪ್ರಯತ್ನ ವಿಫಲವಾದರೂ ಈಗ ಅದು ಕೃತಕ ಬುದ್ಧಿಮತ್ತೆಯ ಮೂಲಕ ಸಾಧ್ಯವಾಗುವ ಸಂದರ್ಭ ಬಂದಿದೆ. ಅಂಪೈರ್ ಗಿಂತ ನಿಖರವಾಗಿ ಕ್ಯಾಮರಾಗಳು ತೀರ್ಪು ಹೇಳುತ್ತಿವೆ, ಶಿಕ್ಷಕರ ಜಾಗದಲ್ಲಿ ಮುಂದೆ ರೋಬೋಟ್ ಗಳೇ ಬರಬಹುದು, ನಮ್ಮ ಹೃದಯದಲ್ಲಿ ಏನಾದರೂ ವ್ಯತ್ಯಾಸವಾದರೆ ನಮ್ಮ ಅರಿವಿಗೆ ಬರುವ ಮೊದಲೇ ನಮ್ಮ ಡಾಕ್ಟರ್ ಗೆ ಅದರ ಮಾಹಿತಿ ಹೋಗುವ ಕಾಲವೂ ದೂರವಿಲ್ಲ.ಏನೇ ಆದರೂ ಕೃತಕ ಬುದ್ಧಿಮತ್ತೆಯು ಪ್ರಕೃತಿದತ್ತವಾದ ನಮ್ಮ ಮೆದುಳಿನ ಕೂಸೇ ಎಂಬುದನ್ನು ತಿಳಿದಾಗ ಆತಂಕ ಇರುವುದಿಲ್ಲ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜುಕೇಶನ್ ಪ್ರಾಂಶುಪಾಲ ಡಾ. ಬಿ. ವೀರಪ್ಪ ಅವರು ಮಾತನಾಡಿ, ಭಾರತವು ಪ್ರತಿಭಾವಂತ ತಂತ್ರಜ್ಞಾನಿಗಳ ಕ್ಷೇತ್ರವೆಂಬಂತಾಗಿದೆ ಎಂದರು.

ಕಾಲೇಜಿನ ನಿರ್ದೇಶಕ ಡಾ. ಸ್ವಾಮಿ ತ್ರಿಭುವನಾನಂದ ಹೆಚ್.ವಿ. ಅವರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದರ್ಶನ್ ಪಾಟೀಲ್ ಮತ್ತು ಅಲ್ಫೀಸಾ ನಿರೂಪಿಸಿದ ಕಾರ್ಯಕ್ರಮದಲ್ಲಿ ಪ್ರಾರ್ಥನೆಯನ್ನು ಸೌಜನ್ಯ, ಆದಿತ್ಯ, ಸಂಜನಾ ಹಾಡಿದರು.

ಅನಿಲ್ ಅತ್ತರ್ ಸ್ವಾಗತಿಸಿದರು. ಎಂ.ಕೆ. ಸ್ಫೂರ್ತಿ ವಿಚಾರ ಸಂಕಿರಣ ವರದಿ ವಾಚಿಸಿದರು. ಅಕಿಲ್ ಅನ್ರ ಹಾಗೂ ಉಜ್ಮಾ ನಾಜ್ ಅತಿಥಿ ಪರಿಚಯ ಮಾಡಿದರು. ಪ್ರೊ. ಬಿ.ವಿ. ಶ್ವೇತಾ ವಂದಿಸಿದರು.

ತೀರ್ಪುಗಾರರಾಗಿ ಡಾ. ಜಿ.ವೈ. ವಿಶ್ವನಾಥ್, ಪಿ. ಪ್ರತಿಮಾ, ಪ್ರೊ. ಬಿ.ಎಸ್. ನಾಗರಾಜ್, ಪ್ರೊ. ಎಸ್. ಸರೋಜಾ, ಪಿ. ಉಮಾ ಮಹೇಶ್ವರಪ್ಪ, ಪ್ರೊ. ಕೆ.ಎಸ್. ವಿಜಯ್, ಡಾ. ಜಿ.ಎಸ್. ವಿದ್ಯಾ, ಡಾ. ಕೆ.ಎಸ್. ಚೈತ್ರಾ, ಡಾ. ಎಂ. ಶೃತಿ, ಡಾ. ಎ.ಜೆ. ನೀತಾ ಕಾರ್ಯಕ್ರಮ ನಿರ್ವಹಿಸಿದರು.

## ನಗರದ ಜಿಎಂ ವಿವಿಯಲ್ಲಿ ಇಂದು ಬಿಐಎಸ್ ಕ್ಲಬ್‌ಗಳ ಉದ್ಘಾಟನೆ

ದಾವಣಗೆರೆ, ಮೇ 21- ಜಿ.ಎಂ. ವಿಶ್ವವಿದ್ಯಾನಿಯದಲ್ಲಿ ಬಿ.ಐ.ಎಸ್. ಕ್ಲಬ್‌ಗಳ ಉದ್ಘಾಟನೆ ಹಾಗೂ ಪ್ರಾಜೆಕ್ಟ್ ಪ್ರದರ್ಶನ ಕಾರ್ಯಕ್ರಮವನ್ನು ನಾಳೆ ದಿನಾಂಕ 22ರಂದು ಆಯೋಜಿಸಲಾಗಿದೆ ಎಂದು ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ವಿಭಾಗದ ಮುಖ್ಯಸ್ಥ ಭರತ್ ಕೆ.ಎನ್. ಹೇಳಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂಜಿನಿಯರಿಂಗ್ ಅಂತಿಮ ವರ್ಷದ ವಿದ್ಯಾರ್ಥಿಗಳು ತಯಾರಿಸಿರುವ 7 ವಿಭಾಗಗಳ 120ಕ್ಕೂ ಹೆಚ್ಚು ಪ್ರಾಜೆಕ್ಟ್ ಮಾದರಿಗಳು ಪ್ರದರ್ಶನದಲ್ಲಿರಲಿವೆ ಎಂದು ಹೇಳಿದರು.

ಭಾರತೀಯ ಮಾನಕ ಬ್ಯೂರೋ ಸಹಯೋಗದೊಂದಿಗೆ ಸ್ಥಾಪಿತವಾಗಿರುವ ಸ್ಟ್ಯಾಂಡರ್ಡ್ ಕ್ಲಬ್‌ಗಳ ಉದ್ಘಾಟನೆಯೂ ಇದೇ ವೇಳೆ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ಭಾರತೀಯ ಮಾನಕ ಬ್ಯೂರೋ ವಿಜ್ಞಾನಿ ಹಾಗೂ ಉಪ ನಿರ್ದೇಶಕ ಅಶುತೋಷ್ ಅಗರ್‌ವಾಲ್ ಆಗಮಿಸಲಿದ್ದಾರೆ. ಜಿಎಂ ವಿವಿ ಕುಲಪತಿ ಡಾ.ಎಸ್.ಆರ್. ಶಂಕರಪಾಲ್, ಜಿಎಂಐಟಿ ಕಾಲೇಜು ಪ್ರಾಂಶುಪಾಲ ಡಾ.ಸಂಜಯ್ ಪಾಂಡೆ ಎಂ.ಬಿ. ಉಪಸ್ಥಿತರಿರಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ವಿವಿಯ ವೃತ್ತಿ ಸಲಹೆ ಮತ್ತು ಉದ್ಯೋಗ ವಿಭಾಗದ ನಿರ್ದೇಶಕ ತೇಜಸ್ವಿ ಕಟ್ಟಿಮನಿ ಟಿ.ಆರ್., ಬಯೋ ಟೆಕ್ನಾಲಜಿ ವಿಭಾಗದ ಮುಖ್ಯಸ್ಥ ಡಾ.ಪ್ರದೀಪ್, ಭೌತ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಸ್ವರೂಪ್ ಇದ್ದರು.

## ಬಿಜೆಪಿ ಅಭ್ಯರ್ಥಿ 24 ಗಂಟೆ ಪ್ರಚಾರ ಮಾಡದಂತೆ ನಿರ್ಬಂಧ

ಕೊಲ್ಕೊತಾ, ಮೇ 21 – ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತ ಬ್ಯಾನರ್ಜಿ ಅವರ ಕುರಿತು ವಿವಾದಾತ್ಮಕ ಹೇಳಿಕೆ ನೀಡಿದ್ದ ಬಿಜೆಪಿ ಅಭ್ಯರ್ಥಿ ಹಾಗೂ ಕಲ್ಕತ್ತಾ ಹೈಕೋರ್ಟ್ ಮಾಜಿ ನ್ಯಾಯಮೂರ್ತಿ ಅಭಿಜಿತ್ ಗಂಗೋಪಾಧ್ಯಾಯ್ ಅವರು 24 ಗಂಟೆಗಳ ಕಾಲ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಬಾರದು ಎಂದು ಚುನಾವಣಾ ಆಯೋಗ ನಿರ್ಬಂಧಿಸಿದೆ.

ಚುನಾವಣಾ ಪ್ರಚಾರದ ವೇಳೆ ಇಂತಹ ತಪ್ಪುಗಳು ಪುನರಾವರ್ತನೆ ಯಾಗದಂತೆ ಬಿಜೆಪಿಯ ಎಲ್ಲ ಅಭ್ಯರ್ಥಿಗಳಿಗೆ ಹಾಗೂ ಪ್ರಚಾರಕರಿಗೆ ತಿಳಿಸುವಂತೆ ಪಕ್ಷದ ಅಧ್ಯಕ್ಷ ಜೆ.ಬಿ. ನಡ್ಡಾ ಅವರಿಗೆ ಆಯೋಗ ಆದೇಶಿಸಿದೆ.

ಗಂಗೋಪಾಧ್ಯಾಯ್ ಹೇಳಿಕೆ ಕೀಳು ಮಟ್ಟದ ವೈಯಕ್ತಿಕ ದಾಳಿಯಾಗಿದೆ. ಇದು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ ಎಂದು ಆಯೋಗ ಹೇಳಿದೆ.

ಟಮ್ಲುಕ್ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿರುವ ಗಂಗೋಪಾಧ್ಯಾಯ್, ಪ್ರಚಾರದ ವೇಳೆ ಸಾರ್ವಜನಿಕ ಹೇಳಿಕೆಯ ಬಗ್ಗೆ ಎಚ್ಚರವಾಗಿರಬೇಕು ಎಂದೂ ತಿಳಿಸಲಾಗಿದೆ.

## ದೂರವಾಣಿ ಕದ್ದಾಲಿಕೆ ಆರೋಪದ ತನಿಖೆಗೆ ಅಶೋಕ್ ಆಗ್ರಹ

ಬೆಂಗಳೂರು, ಮೇ 21 – ದೂರವಾಣಿ ಕದ್ದಾಲಿಕೆ ಬಗ್ಗೆ ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಮಾಡಿರುವ ಆರೋಪಗಳ ಬಗ್ಗೆ ಸಿ.ಬಿ.ಐ. ತನಿಖೆ ನಡೆಸಬೇಕು ಎಂದು ವಿಧಾನಸಭೆಯಲ್ಲಿ ವಿಪಕ್ಷ ನಾಯಕರಾಗಿರುವ ಆರ್. ಅಶೋಕ್ ಒತ್ತಾಯಿಸಿದ್ದಾರೆ. ತಮ್ಮ ಹಾಗೂ ಕುಟುಂಬದ ಸದಸ್ಯರೂ ಸೇರಿದಂತೆ 40 ಜನರ ದೂರವಾಣಿ ಕದ್ದಾಲಿಕೆ ಮಾಡಲಾಗುತ್ತಿದೆ ಎಂದು ಕುಮಾರಸ್ವಾಮಿ ಆರೋಪಿಸಿದ್ದರು. ಈ ಆರೋಪವನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಗೃಹ ಸಚಿವ ಜಿ. ಪರಮೇಶ್ವರ ತಳ್ಳಿ ಹಾಕಿದ್ದರು.

ಪತ್ರಕರ್ತರೊಂದಿಗೆ ಮಾತನಾಡಿದ ಅಶೋಕ್, ಚೀನಾ ನಿರ್ಮಿತ 40-50 ಲಕ್ಷ ರೂ.ಗಳ ಉಪಕರಣಗಳು ಅಕ್ರಮ ದೂರವಾಣಿ ಕದ್ದಾಲಿಕೆಗೆ ಸಿಗುತ್ತವೆ. ಅವುಗಳನ್ನು ಬಳಸಿ ಕದ್ದಾಲಿಕೆ ಮಾಡಿರಬಹುದು ಎಂದು ಶಂಕಿಸಿದ್ದಾರೆ.

## ಪ್ರಕ್ಷುಬ್ಧತೆಗೆ ಸಿಲುಕಿದ ವಿಮಾನ : ಬ್ರಿಟಿಷ್ ವ್ಯಕ್ತಿ ಸಾವು

ಬ್ಯಾಂಕಾಕ್, ಮೇ 21 – ಸಿಂಗಪುರ ಏರ್‌ಲೈನ್ಸ್‌ನ ವಿಮಾನವೊಂದು ಹಾರಾಟ ನಡೆಸುವಾಗ ಮೂರು ನಿಮಿಷಗಳಲ್ಲಿ 6 ಸಾವಿರ ಅಡಿಗಳಷ್ಟು ಕುಸಿದಿದ್ದು, ಬ್ರಿಟಿಷ್ ವ್ಯಕ್ತಿಯೊಬ್ಬರು ಸಾವನ್ನಪ್ಪಿದ್ದಾರೆ ಹಾಗೂ ಹಲವರು ಗಾಯಗೊಂಡಿದ್ದಾರೆ. ವಿಮಾನದ ಮಾರ್ಗವನ್ನು ಬದಲಿಸಲಾಗಿದ್ದು, ತೀವ್ರ ಹವಾಮಾನದ ನಡುವೆಯೇ ಬ್ಯಾಂಕಾಕ್‌ನಲ್ಲಿ ಇಳಿಸಲಾಗಿದೆ.

ಆಗಸದಲ್ಲಿ ವಿಮಾನ ತೀವ್ರವಾಗಿ ಹೊಯ್ದಾಡಿದಾಗ 73 ವರ್ಷದ ಬ್ರಿಟಿಷ್ ವ್ಯಕ್ತಿಯೊಬ್ಬರು ಹೃದಯಾಘಾತಕ್ಕೀಡಾಗಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಲಂಡನ್‌ನಿಂದ ಸಿಂಗಪುರಕ್ಕೆ ತೆರಳುತ್ತಿದ್ದ ಬೋಯಿಂಗ್ 777 ವಿಮಾನ ವೈಮಾನಿಕ ಪ್ರಕ್ಷುಬ್ಧತೆ ಎದುರಿಸಿದೆ. ವಿಮಾನದಲ್ಲಿ 211 ಪ್ರಯಾಣಿಕರು ಹಾಗೂ 18 ಸಿಬ್ಬಂದಿ ಇದ್ದರು.

ವಿಮಾನ ಕೆಳಗಿಳಿದ ತಕ್ಷಣ ತುರ್ತು ವೈದ್ಯಕೀಯ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ನೆರವಾಗಿದ್ದಾರೆ. 12 ಜನರು ಚಿಕಿತ್ಸೆ ಪಡೆದು ಬಿಡುಗಡೆಯಾಗಿದ್ದರೆ, 18 ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸಿಂಗಪುರ ಏರ್‌ಲೈನ್ಸ್ ವಿಮಾನ ಒಂದು ಹಂತದಲ್ಲಿ 37 ಸಾವಿರ ಅಡಿ ಎತ್ತರದಲ್ಲಿ ಹಾರುತ್ತಿತ್ತು. ನಂತರ 31,000 ಅಡಿಗಳಿಗೆ ತೀವ್ರವಾಗಿ ಕುಸಿದಿದೆ. ಸುಮಾರು ಹತ್ತು ನಿಮಿಷ ಗಳ ಕಾಲ ವಿಮಾನ ಇದೇ ಹಂತದಲ್ಲಿತ್ತು. ನಂತರ ವಿಮಾನವನ್ನು ಬ್ಯಾಂಕಾಕ್‌ನಲ್ಲಿ ಇಳಿಸಲಾಗಿದೆ.

ಮ್ಯಾನ್‌ಮಾರ್ ಬಳಿಯ ಅಂಡಮಾನ್ ಸಮುದ್ರದ ಮೇಲೆ ವಿಮಾನ ಸಾಗುವಾಗ ಪ್ರಕ್ಷುಬ್ಧತೆ ಉಂಟಾಗಿದೆ.

ಉಷ್ಣತೆ, ಎತ್ತರದ ಪರ್ವತಗಳೂ ಸೇರಿದಂತೆ ಹಲವು ಕಾರಣಗಳಿಂದ ಗಾಳಿ ಚಲನೆಯಲ್ಲಿ ತೀವ್ರ ಏರಿಳಿತವಾಗುತ್ತದೆ. ಇಂತಹ ಪ್ರದೇಶಗಳ ಮೂಲಕ ವಿಮಾನ ಹಾದುಹೋಗುವಾಗ ವಿಮಾನದ ಹಾರಾಟದಲ್ಲಿ ದಿಢೀರ್ ಬದಲಾವಣೆಯಾಗುತ್ತದೆ. ವಿಮಾನವು ಗಾಳಿಯ ಸೆಳೆತಕ್ಕೆ ಸಿಕ್ಕಿ ಅಲುಗಾಡುತ್ತದೆ. ಕೆಲವೊಮ್ಮೆ ಗಾಳಿ ಪ್ರಕ್ಷುಬ್ಧತೆ ತೀವ್ರವಾಗಿದ್ದಾಗ ವಿಮಾನವು ಕುಸಿತ ಕಾಣುತ್ತದೆ.

## ಬುದ್ಧಿಶಕ್ತಿ ಬೆಳವಣಿಗೆಗೆ ಚದುರಂಗ ಸಹಕಾರಿ



ದಿನೇಶ್ ಕೆ. ಶೆಟ್ಟಿ

ದಾವಣಗೆರೆ, ಮೇ 21- ಜಿಲ್ಲಾ ಚೆಸ್ ಅಸೋಸಿಯೇಷನ್‌ನಿಂದ ನಗರದಲ್ಲಿ ಗುರುಭವನದಲ್ಲಿ ಅಂತರ್ ಜಿಲ್ಲಾ ಮಟ್ಟದ ಚದುರಂಗ ಸ್ಪರ್ಧೆಯನ್ನು ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮಕ್ಕಳಿಗೆ ಚದುರಂಗ ಆಟ ಆಡುವು ದರಿಂದ ಬುದ್ಧಿಶಕ್ತಿ ಬೆಳವಣಿಗೆಗೆ ಸಹಕಾರಿ ಯಾಗುತ್ತದೆ. ಮಕ್ಕಳು ದೃಢ ನಿರ್ಧಾರ ತೆಗೆದುಕೊಳ್ಳುವಲ್ಲಿ ಪ್ರಬಲರಾಗುತ್ತಾರೆ. ಇಂತ ಹ ಆಟಗಳು ಹೆಚ್ಚಿನ ರೀತಿಯಲ್ಲಿ ಮಕ್ಕಳಿಗೆ ಸಿಗುವಂತಾಗಲಿ, ಮಕ್ಕಳು ರಾಷ್ಟ್ರ ಮತ್ತು ರಾಜ್ಯಮಟ್ಟಗಳಲ್ಲಿ ಹೆಸರು ಮಾಡಲಿ, ಮುಂದಿನ ದಿನಗಳಲ್ಲಿ ದಾವಣಗೆರೆಯಲ್ಲಿ ಅಂತ ರರಾಷ್ಟ್ರೀಯ, ರಾಷ್ಟ್ರೀಯ ಪಂದ್ಯಾವಳಿಗಳು ನಡೆಯಲಿ ಎಂದು ಹೇಳಿದರು ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಮಾಜಿ ಸದಸ್ಯ ಡಿ.ಎನ್.ಜಗದೀಶ್, ಅಂತರರಾಷ್ಟ್ರೀಯ ಚೆಸ್ ತೀರ್ಪುಗಾರರಾದ ಪ್ರಾಣೇಶ್ ಯಾದವ್, ವಿಜಯ್ ಕುಮಾರ್, ಪಂದ್ಯಾವಳಿಯ ಆಯೋಜಕರಾದ ಯುವರಾಜ್, ಮಂಜುಳಾ ಯುವರಾಜ್ ಉಪಸ್ಥಿತರಿದ್ದರು.

## ತೋಟಗಳಿಗೆ ಜೀವಕಳೆ ತಂದ ಮುಂಗಾರು ಪೂರ್ವ ಮಳೆ





ಹಳ್ಳಗಳಲ್ಲಿ ಹರಿದು ಬಂದ ನೀರು

ಮಲೇಬೆನ್ನೂರು, ಮೇ 21 - ಬರಗಾಲ ಎದುರಿಸುತ್ತಿದ್ದ ಸಕಲ ಜೀವರಾಶಿಗಳಿಗೂ ಕಳೆದ 3-4 ದಿನಗಳಿಂದ ಸುರಿದ ಮುಂಗಾರು ಪೂರ್ವ ಮಳೆ ಭರವಸೆ ಮೂಡಿಸಿದ್ದು, ಎಲ್ಲೆಡೆ ತಂಪು ವಾತಾವರಣ ನಿರ್ಮಾಣ ವಾಗಿದೆ. ಹಳ್ಳಗಳಲ್ಲಿ ಸ್ವಲ್ಪ ಮಟ್ಟಿಗೆ ನೀರು ಹರಿಯುತ್ತಿದ್ದು, ಬಿಸಿಲಿನ ಬೇಗೆಯಿಂದ ತತ್ತರಿಸಿದ್ದ ತೋಟಗಳಿಗೆ ಈ ಮಳೆ ಜೀವಕಳೆ ತಂದಿದೆ.

ಮಲೇಬೆನ್ನೂರು ಪಟ್ಟಣದ ಆಶ್ರಯ ಕಾಲೋನಿ ಸಮೀಪದ ಗುಡ್ಡ ಗಾಡು ಪ್ರದೇಶದಲ್ಲಿ ಬಿದ್ದಿರುವ ಮಳೆ ರೈತರ ಕೃಷಿ ಚಟುವಟಿಕೆಗಳಿಗೆ ಆಶಾ ಭಾವನೆ ಮೂಡಿಸಿದೆ. ಕೊಮಾರನಹಳ್ಳಿ ಸಮೀಪದ ಗುಡ್ಡಗಾಡು ಪ್ರದೇಶದಲ್ಲಿ ಸೋಮವಾರ ರಾತ್ರಿ ಮತ್ತು ಮಂಗಳವಾರ ಮಧ್ಯಾಹ್ನ ಸುರಿದ ಮಳೆಯಿಂದಾಗಿ ಹಾಲವರ್ತಿ ಹಳ್ಳದ ಹಾಗೂ ಮಿಂಚುಳ್ಳಿ ಜಲಪಾತದಲ್ಲಿ ನೀರಿನ ಹರಿವು ಹೆಚ್ಚಾಗಿತ್ತು. ಜಿಗಳಿ-ಕುಂಬಳೂರು ನಡುವೆ ಇರುವ ಹಳ್ಳದಲ್ಲಿ ನೀರು ಹರಿಯಿತು. ಆದರೆ ಬ್ಯಾಲದ ಹಳ್ಳಿ ಹಳ್ಳ ಮಾತ್ರ ಬತ್ತಿ ಬರಿದಾಗಿದೆ.

## ತುಂಗಾ, ಭದ್ರಗಳಿಗೆ ಒಳಹರಿವು ಹೆಚ್ಚಳ



ಶಿವಮೊಗ್ಗ, ಮೇ 21 - ಭದ್ರಾ ಜಲಾನಯನ ಪ್ರದೇಶದಲ್ಲಿ ಮಳೆ ಮುಂದುವರೆದಿದ್ದು, ನದಿಗಳಲ್ಲಿ ನೀರಿನ ಹರಿವು ಹೆಚ್ಚಾಗುತ್ತಿದೆ. ಭದ್ರಾ ಜಲಾಶಯಕ್ಕೆ ಸೋಮವಾರ 1347 ಕ್ಯೂಸೆಕ್ಸ್ ಇದ್ದ ಒಳ ಹರಿವು ಮಂಗಳವಾರ ಜಲಾಶಯದ ನೀರಿನ ಮಟ್ಟ 115 ಅಡಿ 7 ಇಂಚು ಆಗಿದ್ದು, ಕಳೆದ ವರ್ಷ ಈ ದಿನ ಜಲಾಶಯದಲ್ಲಿ 139 ಅಡಿ 2 1/2 ಇಂಚು ನೀರಿತು. ಗಾಜನೂರಿನ ತುಂಗಾ ಜಲಾಶಯಕ್ಕೆ ಒಳ ಹರಿವು ಹೆಚ್ಚಾಗಿದೆ. ತುಂಗಭದ್ರಾ ನದಿ ಪಾತ್ರದ ನಗರ-ಪಟ್ಟಣಗಳಲ್ಲಿ ಮತ್ತು ಹಳ್ಳಿಗಳಲ್ಲಿ ಮಳೆ ಆಗುತ್ತಿರುವುದರಿಂದ ನದಿಯಲ್ಲಿ ನೀರಿನ ಹರಿವು ನಿಧಾನವಾಗಿ ಪ್ರಾರಂಭವಾಗಿದೆ. ಈ ಬೆಳವಣಿಗೆಗಳು ರೈತ ಸಮುದಾಯಕ್ಕೆ ಹರ್ಷ ತಂದಿದೆ.

# ಆಗ್ನೇಯ ಕ್ಷೇತ್ರ ಮತದಾರರ ಪಟ್ಟಿಯಿಂದ ವಂಚಿತರಿಂದ ಪ್ರತಿಭಟನೆ



ಜಗಳೂರು

ಜಗಳೂರು, ಮೇ 21 - ಆಗ್ನೇಯ ಶಿಕ್ಷಕರ ಕ್ಷೇತ್ರದ ಹೊಸ ಮತದಾರರ ಸೇರ್ಪಡೆ ನೋಂದಣಿಯಿಂದ ವಂಚಿತರಾದ ಉಪನ್ಯಾಸಕರು ತಹಶೀಲ್ದಾರ್ ಕಛೇರಿ ಮುಂಭಾಗ ಜಮಾಯಿಸಿ ಚುನಾವಣಾ ಆಯೋಗಕ್ಕೆ ಕಾರಣ ನೀಡಲು ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

ಅತಿಥಿ ಉಪನ್ಯಾಸಕ ಬುಳ್ಳೇನಹಳ್ಳಿ ಮಹೇಶ್ ಮಾತನಾಡಿ, ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಗೆ ಸೇರ್ಪಡೆಗೊಳ್ಳಲು ಚುನಾವಣಾ ಆಯೋಗದ ನಿರ್ದೇಶನದಂತೆ ಅನುದಾನಿತ, ಅನುದಾನರಹಿತ, ಸರ್ಕಾರಿ ಪ್ರೌಢಶಾಲೆ ಹಾಗೂ ಕಾಲೇಜುಗಳಲ್ಲಿ ಸೇವೆಗೈಯ್ಯುತ್ತಿರಬೇಕು. ಅಗತ್ಯ ದಾಖಲೆಗಳೊಂದಿಗೆ ನೋಂದಣಿಗೆ ಅರ್ಜಿ ಸಲ್ಲಿಸಬೇಕು ಎಂಬ ಮಾನ ದಂಡಗಳಿಗೆ ಒಳಪಟ್ಟು ನಿಗದಿತ ಸಮಯದಲ್ಲಿ ನೂತನ ಸೇರ್ಪಡೆಗೆ ಪಟ್ಟಣದ ಹೋಚಿ ಬೋರಯ್ಯ ಹಾಗೂ ವಿವಿಧ ಕಾಲೇಜು ಪ್ರೌಢ ಶಾಲೆಗಳ ಉಪನ್ಯಾಸಕರು, ಶಿಕ್ಷಕರುಗಳು ದಾಖಲೆ ಸಮೇತ ಅರ್ಜಿ ಸಲ್ಲಿಸಿದ್ದರೂ ಯಾವುದೇ ಮಾಹಿತಿ ನೀಡದೇ ಚುನಾವಣೆ ಶಾಖೆಯ ನಿರ್ಲಕ್ಷ್ಯದಿಂದ ಮತದಾರರ ಪಟ್ಟಿಯಿಂದ ಕೈಬಿಟ್ಟಿರುವುದು ಮತದಾನದಿಂದ ವಂಚಿತರನ್ನಾಗಿಸಿದೆ ಎಂದು ಆರೋಪಿಸಿದರು.

ಪ್ರಗತಿಪರ ಸಂಘಟನೆ ಮುಖಂಡ ಮಾದಿಹಳ್ಳಿ ಮಂಜುನಾಥ್ ಮಾತ ನಾಡಿ, ಆಗ್ನೇಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಪುರುಷ 14679, ಮಹಿಳೆಯರು 8835 ಒಟ್ಟು 23514 ಮತದಾರರನ್ನೊಳಗೊಂಡಿದ್ದು. ಜಗಳೂರು ತಾಲ್ಲೂಕಿನಲ್ಲಿ ಒಟ್ಟು 350 ಮತದಾರರಿದ್ದಾರೆ. ಪ್ರಸಕ್ತ ಸಾಲಿನಲ್ಲಿ 60 ಜನ ಮಾತ್ರ ಹೊಸ ಸೇರ್ಪಡೆಗೊಂಡಿದ್ದಾರೆ. ಸುಮಾರು 1500 ಕ್ಕೂ ಅಧಿಕ ಪ್ರೌಢಶಾಲೆ ಮತ್ತು ಉಪನ್ಯಾಸಕರುಗಳು ಸೇವೆ ಸಲ್ಲಿಸುತ್ತಿದ್ದಾರೆ. ಆಗ್ನೇಯ ಶಿಕ್ಷಕರ ವಿಧಾನ ಪರಿಷತ್ತು ಚುನಾವಣೆಯಲ್ಲಿ ಪವಿತ್ರ ಮತದಾನದಿಂದ ವಂಚಿತರಾಗುತ್ತಿರುವುದು ಬೇಸರದ ಸಂಗತಿ ಎಂದರು.

ಸಂದರ್ಭದಲ್ಲಿ ಉಪನ್ಯಾಸಕರಾದ ಅಶೋಕ ಕುಮಾರ್, ಮಂಜುನಾಥ್, ರಮೇಶ್, ಶಶಿಕುಮಾರ್ ಸೇರಿದಂತೆ ಇತರರು ಇದ್ದರು.

MATRUCHAYA HEALTH CARE
(Mother & child care Hospital)
2nd cross siddaveerappa Layout, Shamanuru Road, Dvg
HOSPITAL STAFF VACANCY
1) Senior Nurses (GNM) - 3
2) Junior Nurses (GNM) - 3
3) OT Nurses - 2 , 4) Pharmacist - 2
5) Receptionist - 2
Salary based on Eligibility & Exp.
Apply with Biodata, Degree Certificate & Addr. Proof.
Accomadation Available
Conact no. 78298 08443, 97427 62462

# ನಿ. ಡಿವೈಎಸ್ಪಿ ನಾಗರಾಜ್‌ರಿಂದ ಹೂವಿನ ಕರಗ ನೃತ್ಯ ಪ್ರದರ್ಶನ





ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡ ಬಳ್ಳಾಪುರ ತಾಲ್ಲೂಕಿನ ದೊಡ್ಡ ತುಮಕೂರು ಗ್ರಾಮದೇವತೆ ಆದಿಶಕ್ತಿ ಶ್ರೀ ರೇಣುಕಾ ಯಲ್ಲಮ್ಮ ದೇವಿಯ ಹೂವಿನ ಕರಗ ಮಹೋತ್ಸವ ನಾಳೆ ದಿನಾಂಕ 23 ಮತ್ತು 24ರಂದು ನಡೆಯಲಿದೆ.

ನಾಳೆ ದಿನಾಂಕ 23 ರ ಗುರುವಾರ ರಾತ್ರಿ 10.25 ರಿಂದ ಮಧ್ಯ ರಾತ್ರಿ 12.30ರ ವರೆಗೆ ಸಲ್ಲುವ ಶುಭ ಲಗ್ನದಲ್ಲಿ ಹೂವಿನ ಕರಗ ಮಹೋತ್ಸವ ಆಯೋಜನೆಗೊಂಡಿದೆ.

ಮೂಲತಃ ದೊಡ್ಡ ತುಮಕೂರಿನವರೇ ಆದ ನಿವೃತ್ತ ಪೊಲೀಸ್ ಡಿವೈಎಸ್ಪಿ ರಾ. ನಾಗರಾಜ್ ಅವರು ವಿಶಿಷ್ಟ ನರ್ತನದೊಂದಿಗೆ ಶ್ರೀದೇವಿಯ ಹೂವಿನ ಕರಗವನ್ನು ಹೊರಲಿದ್ದಾರೆ.

ನಾಗರಾಜ್ ಅವರು ಸುಮಾರು 48 ವರ್ಷಗಳಿಂದ ಶ್ರೀ ದೇವಿಯ ಆರಾಧಕರಾಗಿ ವ್ರತವನ್ನು ಆಚರಿಸಿಕೊಂಡು ಕರಗ ಹೊರುತ್ತಾ ಬಂದಿದ್ದಾರೆ.

ರಾ. ನಾಗರಾಜ್ ಎಂದೇ ಗುರುತಿಸಿಕೊಂಡಿ ರುವ ಆರ್. ನಾಗರಾಜ್ ಅವರು ದಾವಣಗೆರೆ ಜಿಲ್ಲೆಯ ಸುತ್ತ-ಮುತ್ತ ವಿವಿಧ ಭಾಗಗಳಲ್ಲಿ ಪೊಲೀಸ್ ಇಲಾಖೆಯ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿ, 2014 ರಲ್ಲಿ ನಿವೃತ್ತರಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

# ನಗರದ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಬುದ್ಧ ಪೂರ್ಣಿಮೆ



ದಾವಣಗೆರೆ, ಮೇ 21- ನಗರದ ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 23ರ ಗುರುವಾರ ಬುದ್ಧ ಪೂರ್ಣಿಮೆ ಪ್ರಯುಕ್ತ ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀಮತಿ ರೂಪ, ಸಿ.ಗಣೇಶ್ ಮತ್ತು ಸಹ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

# ಮೊದಲ ಚತುರ್ಥದಲ್ಲಿ ಶೇ.7.5ರ ಬೆಳವಣಿಗೆ ನಿರೀಕ್ಷೆ

ಮುಂಬೈ, ಮೇ 21 – ಪ್ರಸಕ್ತ ಹಣಕಾಸು ವರ್ಷದ ಮೊದಲ ಚತುರ್ಥದಲ್ಲಿ ದೇಶದ ಆರ್ಥಿಕ ಬೆಳವಣಿಗೆ ದರ ಶೇ.7.5ರಷ್ಟಿರಲಿದೆ ಎಂದು ರಿಸರ್ವ್ ಬ್ಯಾಂಕ್‌ನ ಮೇ ತಿಂಗಳ ಪ್ರಕಟಣೆಯೊಂದರಲ್ಲಿನ ಲೇಖನದಲ್ಲಿ ತಿಳಿಸಲಾಗಿದೆ.

ಏಪ್ರಿಲ್ ತಿಂಗಳಲ್ಲಿ ಆರ್ಥಿಕ ಚಟುವಟಿಕೆಗಳು ಚುರುಕಾಗಿವೆ ಹಾಗೂ ಗ್ರಾಮೀಣ ಭಾಗದಲ್ಲಿ ಆಹಾರೇತರ ವಸ್ತುಗಳ ಬೇಡಿಕೆ ಹೆಚ್ಚಾಗಿದೆ. ಇದು ಆರ್ಥಿಕ ಬೆಳವಣಿಗೆಗೆ ನೆರವಾಗಲಿದೆ ಎಂದು ತಿಳಿಸಲಾಗಿದೆ.

# ಪ್ರಸ್ತುತ ವರ್ಷ 20 ಗ್ರಾಮ ಗ್ರಂಥಾಲಯಗಳ ಡಿಜಿಟಲೀಕರಣ

## ಶಿಕ್ಷಣ ಫೌಂಡೇಷನ್, ಆರೋಗ್ಯ- ಶಿಕ್ಷಣ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಜಿಪಂ ಸಿಇಓ ಸುರೇಶ್ ಇಟ್ನಾಳ್

ದಾವಣಗೆರೆ, ಮೇ 21 - ಈ ವರ್ಷ ಜಿಲ್ಲೆಯಲ್ಲಿನ 20 ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಡಿಜಿಟಲೀಕರಣ ಮಾಡಲಾಗು ತ್ತಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ತಿಳಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಶಿಕ್ಷಣ ಫೌಂಡೇಷನ್ ಮತ್ತು ಡೆಲ್ ಸಂಸ್ಥೆಯ ಸಹಯೋಗದಲ್ಲಿ ಈ ಕಾರ್ಯ ಮಾಡಲಾಗುವುದು ಎಂದು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂದು ಶಿಕ್ಷಣ ಫೌಂಡೇಷನ್ ಸಿ.ಇ.ಓ. ಲೆಫ್ಟಿನೆಂಟ್ ಕಮಾಂಡರ್ ಎನ್. ಸುನಿಲ್ ಮತ್ತು ಆರೋಗ್ಯ, ಶಿಕ್ಷಣ ಇಲಾಖೆ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಅವರು ಮಾತನಾಡಿದರು.

ರಾಜ್ಯದ 6000 ಸಾವಿರ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ, 4000 ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಡಿಜಿಟಲೀಕರಣ ಮಾಡುವ ಕಾರ್ಯ ಮುಂದುವರೆದಿದೆ. ಈ ವರ್ಷ ರಾಜ್ಯದ 1000 ಗ್ರಂಥಾಲಯಗಳಿಗೆ ಡಿಜಿಟಲೀಕರಣ ಅಳವಡಿಕೆ ಹಾಗೂ ಗ್ರಾಮ ಡಿಜಿ ವಿಕಸನ ಕಾರ್ಯಕ್ರಮ ಅನುಷ್ಠಾನ ಮಾಡಲಾಗುತ್ತಿದೆ ಎಂದು ತಿಳಿಸಿದರು.



ಜಿಲ್ಲೆಯಲ್ಲಿ ಕಳೆದ ವರ್ಷ 61 ಗ್ರಾಮ ಪಂಚಾಯತ್ ಗ್ರಂಥಾಲಯಗಳಿಗೆ ಡಿಜಿಟಲೀ ಕರಣದ ಮೂಲಕ ಗ್ರಾಮ ಡಿಜಿ ವಿಕಸನ ಕಾರ್ಯಕ್ರಮ ಅನುಷ್ಠಾನ ಮಾಡಲಾಗಿದೆ. ಜೊತೆಗೆ ಈ ವರ್ಷ 20 ಗ್ರಾಮ ಪಂಚಾಯತ್ ಗ್ರಂಥಾಲಯಗಳಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವ ಯೋಜನೆಯನ್ನು ರೂಪಿಸಲಾಗಿದೆ ಎಂದು ತಿಳಿಸಿದರು.

ಗ್ರಾಮಾಂತರ ಪ್ರದೇಶದಲ್ಲಿನ ವಿದ್ಯಾರ್ಥಿಗಳಲ್ಲಿ ಡಿಜಿಟಲ್ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು, ಈ ಯೋಜನೆಯ ಉದ್ದೇಶವಾಗಿದೆ. ಇದಕ್ಕೆ ಪೂರಕವಾಗಿ ಲ್ಯಾಪ್‌ಟಾಪ್, ಆಂಡ್ರಾಯ್ಡ್ ಮೊಬೈಲ್. ಮಾನಿಟರ್, ಟಿವಿ, ಇಂಟರ್‌ನೆಟ್ ಸಂಪರ್ಕ ಸೇರಿ ಮೂಲ ತಾಂತ್ರಿಕ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಶಿಕ್ಷಣ ಫೌಂಡೇಷನ್ ಸಿ.ಇ.ಓ. ಲೆಫ್ಟಿನೆಂಟ್ ಕಮಾಂಡರ್ ಎನ್. ಸುನಿಲ್ ಮಾತನಾಡಿ, ಶಿಕ್ಷಣ ಪೀಡಿಯಾ ಆ್ಯಪ್ ಮೂಲಕ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಪಾಠ, ನೋಟ್ಸ್, ಸಂಬಂಧಿಸಿದ ವಿಡಿಯೋ, ಚಿತ್ರಗಳನ್ನು ಒದಗಿಸಲಾಗಿದೆ. ಪಿಯುಸಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳಿವೆ. ಪ್ರಾಥಮಿಕ ಶಾಲೆಯ ಮಕ್ಕಳಿಗೆ ಸಣ್ಣ ಕಥೆಗಳಿವೆ. ಅಲ್ಲದೇ ಯುವಕರು ಡಿಜಿಟಲ್ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಬೇಕಾದ ವ್ಯವಸ್ಥೆಯಿದೆ. ವಿದ್ಯಾರ್ಥಿಗಳು ತಮ್ಮ ಸದಸ್ಯತ್ವ ಸಂಖ್ಯೆಯನ್ನು ನಮೂದಿಸುವ ಮೂಲಕ ಈ ಆ್ಯಪ್‌ನ ಪ್ರಯೋಜನ ಪಡೆಯಬಹುದಾಗಿದೆ. ಕೃತಕ ಬುದ್ಧಿಮತ್ತೆ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ಕುರಿತು ಈ ವರ್ಷ ಮಾಹಿತಿ ನೀಡುವ ಯೋಜನೆಯನ್ನು ರೂಪಿಸಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಷಣ್ಮುಖಪ್ಪ, ಶಿಕ್ಷಣ ಫೌಂಡೇಷನ್ ಸಂಸ್ಥೆಯ ಶಂಭುಲಿಂಗ, ಗುರುಪಾದಪ್ಪ, ಸುರೇಶ್ ನಾಯ್ಕ ಹಾಗೂ ಇನ್ನಿತರರು ಭಾವಹಿಸಿದ್ದರು.

# ಧಾರಾಕಾರ ಮಳೆಗೆ ಹರಿಹರ ಕೂಲ್...!



ಹರಿಹರ, ಮೇ 21- ನಗರದಲ್ಲಿ ಮಂಗಳವಾರ ಸಂಜೆ ಗುಡುಗು, ಸಿಡಿಲಿನೊಂದಿಗೆ ಸುರಿದ ಧಾರಾಕಾರ ಮಳೆಗೆ ನಗರ ವಾಸಿಗಳು ಸಂತಸದ ಜತೆಗೆ ಸಂಕಷ್ಟ ಎದುರಿಸು ವಂತಾಯಿತು.

ಬೆಳಗ್ಗಿನಿಂದ ಮಧ್ಯಾಹ್ನದ ವರೆಗೆ ತುಸು ಬಿಸಿಲಿನಿಂದ ಕೂಡಿದ್ದ ವಾತವರಣ, ಸಂಜೆ 3.35ಕ್ಕೆ ಗುಡುಗು-ಸಿಡಿಲಿನಿಂದ ಆರ್ಭಟಿಸಿದ ಮಳೆಯಿಂದಾಗಿ ರಸ್ತೆ, ಚರಂಡಿಯಲ್ಲಿ ನೀರು ಉಕ್ಕಿ ಕೆಲವು ಮನೆಗಳಿಗೆ ನೀರು ನುಗ್ಗಿತು.

ಇದೇ ವೇಳೆ ದೊಡ್ಡ ಪ್ರಮಾಣದ ಸಿಡಿಲೊಂದು ನಗರ ವ್ಯಾಪ್ತಿಯ ಹೊರವಲಯದಲ್ಲಿ ಬಡಿದಿರಬಹುದು ಎನ್ನುವ ಸಂಶಯ ನಗರ ವಾಸಿಗಳಿಗೆ ಕಾಡಿತು.

ಇಲ್ಲಿನ ಬೆಂಕಿನಗರ, ಹಳೇ ಪಿ.ಬಿ. ರಸ್ತೆ, ಹೊಸ ಭರಂಪುರ, ಗಾಂಧಿ ನಗರ, ಬೆಂಕಿ ನಗರ, ತೆಗ್ಗಿನಕೇರಿ, ಕಾಳಿದಾಸ ನಗರ, ಗುತ್ತೂರು, ಹರ್ಲಾಪುರ ಬಡಾವಣೆ ಮತ್ತು ಕೈಲಾಸ ನಗರ ಸೇರಿದಂತೆ ಹಲವು ಬಡಾವಣೆಗಳಲ್ಲಿ ಸಾರ್ವಜನಿಕರು ಮನೆಗೆ ನುಗ್ಗಿದ ನೀರು ಹೊರ ಹಾಕಲು ಹರಸಾಹಸ ಮಾಡಿದರು.

**ಸಂತೆಗೆ ಚಿಂತೆ :** ದಿಢೀರನೆ ಸುರಿದ ಮಳೆಯಿಂದ ಮಂಗಳವಾರ ನಡೆಯುವ ತರಕಾರಿ ಸಂತೆಯ ವ್ಯಾಪಾರ ವಹಿವಾಟು ಕೆಲಹೊತ್ತು ಸ್ಥಗಿತಗೊಂಡಿತ್ತು ಮತ್ತು ಗ್ರಾಮಾಂತರ ಪ್ರದೇಶದ ಜನ ಪರದಾಡುವಂತಾಯಿತು.

ಕೆಲವು ಬಡಾವಣೆಗಳಲ್ಲಿ ಮರಗಳು ಬಿದ್ದಿದ್ದರಿಂದ ಹಲವೆಡೆ ಗಂಟೆಗಳ ಕಾಲ ವಿದ್ಯುತ್ ಸಂಪರ್ಕ ಕಡಿತವಾಗಿತ್ತು.

ಮಳೆರಾಯನ ವಿರಾಮದ ಬಳಿಕ ನಗರಸಭೆಯ ಪೌರಾಯುಕ್ತ ಐಗೂರು ಬಸವರಾಜ್ ಸೇರಿದಂತೆ ಇತರೆ ಸಿಬ್ಬಂದಿ ಹಲವು ಬಡಾವಣೆಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿ, ಹಲವು ಕಡೆಗಳಲ್ಲಿ ಮಳೆಯ ನೀರು ಸರಾಗವಾಗಿ ಹರಿಯುವಂತೆ ವ್ಯವಸ್ಥೆ ಕಲ್ಪಿಸಿದರು.

# ದುಗ್ಗಮ್ಮ ಗುಡಿ ಬಳಿ ಕರಗಲ್ಲಿಗೆ ವಿಶೇಷ ಪೂಜೆ



ದಾವಣಗೆರೆ, ಮೇ 21 - ಉತ್ತಮ ಮಳೆಗಾಗಿ ಮಂತ್ರ ಶಾಸ್ತ್ರಗಳೊಂದಿಗೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಹತ್ತಿರವಿರುವ ಕರಗಲ್ಲಿಗೆ ಇಂದು ಬೆಳಿಗ್ಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಜಿಲ್ಲಾ ಮತ್ತು ತಾಲ್ಲೂಕು ಬಿತ್ತನೆ ಬೀಜ, ಕ್ರಿಮಿನಾಶಕ, ರಸಗೊಬ್ಬರ ಮಾರಾಟಗಾರರ ಸಂಘದ ವತಿಯಿಂದ ಉತ್ತಮ ಮಳೆಗಾಗಿ, ಸರ್ವರ ಒಳಿತಿಗಾಗಿ ಮಂತ್ರ ಶಾಸ್ತ್ರಗಳೊಂದಿಗೆ ಪೂಜೆಯನ್ನು ನೆರವೇರಿಸಲಾಯಿತು.

ಈ ವೇಳೆ ಜಿಲ್ಲೆಯ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ಸಹಾಯಕ ಕೃಷಿ ನಿರ್ದೇಶಕ ಶ್ರೀಧರ್ ಮೂರ್ತಿ, ರೇವಣಸಿದ್ದನ ಗೌಡ, ಶಿವಕುಮಾರ್ ಮಲ್ಲಾಡ ಮತ್ತು ಸಂಘದ ಅಧ್ಯಕ್ಷ ಆರನೇಕಲ್ ಮಂಜಣ್ಣ, ಸಂಘದ ಪದಾಧಿಕಾರಿಗಳಾದ ಸೋಮಶೇಖರ್, ಶಾಂತರಾಜ್, ಸುರೇಶ್, ಖಂಜಾಚಿ ಕಿರಣ್‌ಕುಮಾರ್ ಬಾಳೆಹೊಲದ ಮತ್ತು ತಾಲ್ಲೂಕು ಹಾಗೂ ಜಿಲ್ಲಾ ರಸಗೊಬ್ಬರ ಮಾರಾಟಗಾರರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಕಾಯಕ ದಿನಾಚರಣೆ - ದತ್ತಿ ಕಾರ್ಯಕ್ರಮ

ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಮತ್ತು ಎಸ್. ಬಿ.ಸಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರ ಇವರ ಸಹಯೋಗದಲ್ಲಿ ಇಂದು ಮಧ್ಯಾಹ್ನ 12 ಗಂಟೆಗೆ ಕಾಯಕ ದಿನಾಚರಣೆ - ದತ್ತಿ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಎಸ್.ಬಿ.ಸಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ. ಕೆ. ಷಣ್ಮುಖಪ್ಪ ನೆರವೇರಿಸಲಿದ್ದು, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಬಿ.ಪರಮೇಶ್ವರಪ್ಪ ಅಧ್ಯಕ್ಷತೆ ವಹಿಸುವರು. ಭರ್ಮಪ್ಪ ಮೈಸೂರು 'ವಚನಗಳಲ್ಲಿ ವೈಚಾರಿಕತೆ' ಎಂಬ ವಿಷಯ ಕುರಿತು ಅನುಭಾವ ನೀಡಲಿದ್ದಾರೆ.

ಕಾರ್ಯಕ್ರಮದಲ್ಲಿ ಕಾಯಕ ಜೀವಿಗಳಾದ ಸೈಯದ್ ಉಮರ್ ಮತ್ತು ಎಂ. ಮಂಜುನಾಥ್, ದತ್ತಿ ದಾನಿಗಳಾದ ಶ್ರೀಮತಿ ವನಜಾಕ್ಷಮ್ಮ ಮತ್ತು ಎಂ.ಟಿ ಜಯದೇವಪ್ಪ ಅವರುಗಳನ್ನು ಸನ್ಮಾನಿಸಲಾಗುವುದು.

# ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಗೆ ಅಂತರರಾಷ್ಟ್ರೀಯ ಮನ್ನಣೆ

## ಪ್ರಸ್ತುತ ಸಾಲಿನಲ್ಲಿ 3 ಸಾವಿರ ಕೋಟಿ ದಾಟಿದ ವಹಿವಾಟು; 20 ಕೋಟಿ ಸೆಸ್ ಸಂಗ್ರಹ

ಬ್ಯಾಡಗಿ, ಮೇ 21- ಬ್ಯಾಡಗಿಯ ಮೆಣಸಿನಕಾಯಿ ಮಾರುಕಟ್ಟೆ ವಹಿವಾಟು ಆರಂಭಿಕ ವರ್ಷ 1952ರಲ್ಲಿ ಕೇವಲ ನೂರಾರು ಕೋಟಿಯಷ್ಟಿತ್ತು. ಇಂದು ಮೂರು ಸಾವಿರ ಕೋಟಿಗೂ ಅಧಿಕವಾಗಿದೆ. ಸೆಸ್ ಸಂಗ್ರಹವೇ 20 ಕೋಟಿ ಸಮೀಪಿಸುವಂತಾಗಿದ್ದು, ವಿಶ್ವದಲ್ಲಿಯೇ ಪ್ರಮುಖ ಮಾರುಕಟ್ಟೆಯಾಗಿ ಮನ್ನಣೆ ಪಡೆಯುವಂತಾಗಿದೆ.

ಕಳೆದ ವರ್ಷ 2287 ಕೋಟಿ ರೂ.ಗಳ ವಹಿವಾಟು ನಡೆದು, 13.72 ಕೋಟಿ ರೂ. ಮಾರುಕಟ್ಟೆ ಶುಲ್ಕ ಸಂಗ್ರಹವಾಗಿದೆ. ಅಲ್ಲಲ್ಲಿ ನಿಸರ್ಗ ವಿಕೋಪದಿಂದ ಬರದ ಛಾಯೆ ಆವರಿಸಿದ್ದರೂ ಸಹ ಈ ವರ್ಷ 3187 ಕೋಟಿಯಷ್ಟು ವಹಿವಾಟು ನಡೆಸಿದ್ದು, 19.12 ಕೋಟಿ ಸೆಸ್ ಸಂಗ್ರಹವಾಗಿದೆ. ಕಳೆದ ವರ್ಷ 32 ಲಕ್ಷಕ್ಕೂ ಅಧಿಕ ಚೀಲಗಳು ಅಂದರೆ 10 ಲಕ್ಷ ಕ್ವಿಂಟಾಲ್ ಅವಕ ಆಗಿತ್ತು. ಈ ವರ್ಷ 52 ಲಕ್ಷ ಚೀಲಗಳು ಅಂದರೆ 17.9 ಲಕ್ಷ ಕ್ವಿಂಟಾಲ್ ಮೆಣಸಿನಕಾಯಿ ಅವಕವಾಗಿದೆ



ಕೇವಲ ಅಡುಗೆಗೆ ಬಳಕೆಯಾಗುತ್ತಿದ್ದ ಮೆಣಸಿನ ಕಾಯಿ ಕಳೆದ 3 ದಶಕಗಳಿಂದೀಚೆಗೆ ಅದರಲ್ಲಿನ ನೈಸರ್ಗಿಕ ಬಣ್ಣವನ್ನು ದೇಶ-ವಿದೇಶಗಳಲ್ಲಿ ವಿವಿಧ ಉತ್ಪನ್ನಗಳಿಗೆ ಬಳಸಲಾಗುತ್ತಿದೆ. ಮಾರುಕಟ್ಟೆ ಹಾಗೂ ಪಟ್ಟಣದ ಹೊರವಲಯದಲ್ಲಿ ಮೆಣಸಿನಕಾಯಿಗೆ ಪೂರಕವಾದ ಓಲಿಯೋರೀಜನ್ ಮತ್ತು ಚಿಲಿ ಪೌಡರ್ ತಯಾರಿಸುವ ಉದ್ಯಮಗಳು ಹಾಗೂ ಕೋಲ್ಡ್ ಸ್ಟೋರೇಜ್‌ಗಳಿವೆ. ಇದೊಂದು ಬೃಹತ್ ಉದ್ಯಮವಾಗಿ ಹೊರಹೊಮ್ಮಿದ್ದು, ವರ್ಷದಿಂದ ವರ್ಷಕ್ಕೆ ವಹಿವಾಟು ಹೆಚ್ಚಾಗುತ್ತಿದೆ.

ಇ-ಟೆಂಡರ್ ಪದ್ಧತಿ ವ್ಯಾಪಾರ, ಪಾರದರ್ಶಕ ತೂಕ, ಸ್ಪರ್ಧಾತ್ಮಕ ದರ, ಎಷ್ಟೇ ಮೆಣಸಿನಕಾಯಿ ಅವಕವಾದರೂ ಅಂದೇ ಮಾರಾಟ ಮಾಡಿ ಹಣ ರೈತರಿಗೆ ಕೊಡುವ ವ್ಯವಸ್ಥೆಯ ಬ್ಯಾಡಗಿ ಮಾರುಕಟ್ಟೆ ಬಗ್ಗೆ ಆತ್ಮವಿಶ್ವಾಸವಿದ್ದು, ಆಂಧ್ರಪ್ರದೇಶದ ಆದೋನಿ, ಕರ್ನೂಲ್, ಶ್ರೀ ಶೈಲಂ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ರೈತರು ತಮ್ಮ ಬೆಳೆ ತರುತ್ತಿದ್ದಾರೆ. ಅದರಿಂದಾಗಿ ಬ್ಯಾಡಗಿ ಮೆಣಸಿನ ಕಾಯಿ ಮಾರುಕಟ್ಟೆ ಅಂತರರಾಷ್ಟ್ರೀಯ ಮನ್ನಣೆ ಗಳಿಸುವಂತಾಗಿದೆ.

4 ನೂರು ದಲ್ಲಾಲರ ಅಂಗಡಿಗಳು, 3 ನೂರು ಖರೀದಿದಾರರು, 28 ಕೋಲ್ಡ್ ಸ್ಟೋರೇಜ್ ಜೊತೆಗೆ ಇನ್ನಿತರೆ ಪೂರಕ ಉದ್ಯೋಗಗಳು ಸೇರಿದಂತೆ, ಸುಮಾರು 25 ಸಾವಿರದಷ್ಟು ಕುಟುಂಬಗಳ ಬದುಕು ಕಟ್ಟಿಕೊಟ್ಟ ಮಾರುಕಟ್ಟೆ ಇದಾಗಿದೆ ಎನ್ನಬಹುದು.

# ಅರಸೀಕೆರೆಯಲ್ಲಿ ಉತ್ತಮ ಮಳೆ



ಹರಪನಹಳ್ಳಿ, ಮೇ 21 - ತಾಲ್ಲೂಕಿನ ಅರಸೀಕೆರೆ ಹೋಬಳಿ ವ್ಯಾಪ್ತಿಯಲ್ಲಿ ಮಂಗಳವಾರ ಗುಡುಗು - ಮಿಂಚು ಸಹಿತ ಉತ್ತಮ ಮಳೆಯಾಗಿದೆ. ಮಳೆಗೆ ಹಳ್ಳ, ಗೋಕಟ್ಟೆಗಳಿಗೆ ನೀರು ಹರಿದಿದೆ.

ಧಾರಾಕಾರವಾಗಿ ಸುರಿದ ಮಳೆಗೆ ಅರಸೀಕೆರೆ ಕೋಲ ಶಾಂತೇಶ್ವರ ಮಠದ ಆವರಣದಲ್ಲಿ ನೀರು ಜಲಾವೃತಗೊಂಡಿತ್ತು. ಸಾರ್ವಜನಿಕರ ಸಹಕಾರದೊಂದಿಗೆ ಯಂತ್ರದ ಮೂಲಕ ನೀರು ಹೊರ ಹೋಗುವಂತೆ ಮಾಡಿದರು.

ಉತ್ತಮ ಮಳೆಯಿಂದಾಗಿ ಗ್ರಾಮದ ಹೃದಯ ಭಾಗದಲ್ಲಿರುವ ಚಿಕ್ಕಕೆರೆ ತುಂಬುವ ಹಂತಕ್ಕೆ ತಲುಪಿದೆ. ಐತಿಹಾಸಿಕ ದೊಡ್ಡ ಕೆರೆಗೆ ಒಳ ಹರಿವು ಹೆಚ್ಚಾಗಿದೆ.

ಗ್ರಾಮದ ಕೆರೆಗಳಿಗೆ ಮಳೆ ನೀರು ತಲುಪಿದ್ದು, ರೈತರ ಆಶಾಭಾವ ವೃದ್ಧಿಸಿದೆ.

# ಉಡಾವಣೆಯ ಹಂತದಲ್ಲಿ ದೇಶದ ಆರ್ಥಿಕತೆ

ಮುಂಬೈ, ಮೇ 21 – ಹೆಚ್ಚಾಗುತ್ತಿರುವ ಸರಕುಗಳ ಬೇಡಿಕೆ ಹಾಗೂ ಗ್ರಾಮೀಣ ಭಾಗದಲ್ಲಿ ಆಹಾರೇತರ ವಸ್ತುಗಳ ಬೇಡಿಕೆ ಹೆಚ್ಚಳದ ಕಾರಣದಿಂದಾಗಿ ಭಾರತ ಬಹು ನಿರೀಕ್ಷಿತ ಆರ್ಥಿಕ ಉಡಾವಣೆಯ ಹಂತದಲ್ಲಿದೆ ಎಂದು ರಿಸರ್ವ್ ಬ್ಯಾಂಕ್‌ನ ಮೇ ತಿಂಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ರಿಸರ್ವ್ ಬ್ಯಾಂಕ್ ಡೆಪ್ಯುಟಿ ಗವರ್ನರ್ ಮಿಖೆಲ್ ದೇಬಬ್ರತ ಪಾತ್ರ ಅವರ ನೇತೃತ್ವದ ತಂಡ ಈ ಲೇಖನ ರೂಪಿಸಿದೆ. ಭಾರತ ಬಹು ನಿರೀಕ್ಷಿತ ಆರ್ಥಿಕ ಉಡಾವಣೆಯ ಹಂತದಲ್ಲಿದೆ ಎಂಬ ಆಶಾಭಾವನೆ ಹೆಚ್ಚಾಗುತ್ತಿದೆ ಎಂದು ತಿಳಿಸಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ಮೊದಲ ಬಾರಿಗೆ ಗ್ರಾಮೀಣ ಭಾಗದಲ್ಲಿ ಎಫ್.ಎಂ.ಸಿ.ಜಿ. ವಸ್ತುಗಳ ಬೇಡಿಕೆ ನಗರ ಪ್ರದೇಶಗಳಿಗಿಂತ ವೇಗವಾಗಿ ಹೆಚ್ಚಾಗುತ್ತಿದೆ ಎಂದು ತಿಳಿಸಲಾಗಿದೆ. ಕಳೆದ ಚತುರ್ಥದಲ್ಲಿ ಗ್ರಾಮೀಣ ಭಾಗದಲ್ಲಿ ಎಫ್.ಎಂ.ಸಿ.ಜಿ. ವಸ್ತುಗಳ ಬೇಡಿಕೆ ಶೇ.7.6ರಷ್ಟು ಹೆಚ್ಚಾಗಿತ್ತು. ನಗರ ಪ್ರದೇಶದಲ್ಲಿ ಈ ಪ್ರಮಾಣ ಶೇ.5.7ರಷ್ಟು ಹೆಚ್ಚಾಗಿತ್ತು.

# ಪ್ರಜ್ವಲ್ ಪಾಸ್‌ಪೋರ್ಟ್ ರದ್ದತಿಗೆ ರಾಜ್ಯ ಸರ್ಕಾರದ ಪತ್ರ: ಪರಮೇಶ್ವರ್

ಬೆಂಗಳೂರು, ಮೇ 21 – ಪೆನ್‌ಡ್ರೈವ್ ಪ್ರಕರಣದಲ್ಲಿ ಸಿಲುಕಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ರಾಯಭಾರಿ ಪಾಸ್‌ಪೋರ್ಟ್ ರದ್ದುಗೊಳಿಸುವಂತೆ ವಿದೇಶಾಂಗ ಸಚಿವಾಲಯಕ್ಕೆ ರಾಜ್ಯ ಸರ್ಕಾರ ಪತ್ರ ಬರೆದಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ್ ತಿಳಿಸಿದ್ದಾರೆ. ನ್ಯಾಯಾಲಯ ಹೊರಡಿಸಿರುವ ವಾರಂಟ್ ಆಧರಿಸಿ, ಈ ಕ್ರಮ ತೆಗೆದುಕೊಳ್ಳುವಂತೆ ಗೃಹ ಇಲಾಖೆಯಿಂದ ಪತ್ರ ಬರೆಯಲಾಗಿದೆ ಎಂದು ಪರಮೇಶ್ವರ ಹೇಳಿದ್ದಾರೆ. ರಾಯಭಾರಿ ವೀಸಾ ರದ್ದುಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಈಗಾಗಲೇ ಪತ್ರ ಬರೆದಿದ್ದರು. ಈಗ ವಾರಂಟ್ ಆಧಾರದ ಮೇಲೆ ಪತ್ರ ಬರೆಯಲಾಗಿದೆ ಎಂದು ಸಚಿವರು ಹೇಳಿದ್ದಾರೆ. ಪಾಸ್‌ಪೋರ್ಟ್ ರದ್ದದರೆ ಪ್ರಜ್ವಲ್ ವಿದೇಶದಲ್ಲಿ ಇರಲಾಗದು, ಭಾರತಕ್ಕೆ ಮರಳಬೇಕಾಗುತ್ತದೆ ಎಂದವರು ಹೇಳಿದ್ದಾರೆ.









KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas